# ಅಪರಂಜಿ


ತಿಳಿನಗೆಯ ಕಾರಂಜಿ

ಡಿಸೆಂಬರ್–2024

## ನಾ. ಕಸ್ತೂರಿಯವರ ವಿಶೇಷಾಂಕ




ಬಿಡಿ ಪ್ರತಿ: ರೂ. 10/–


Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com


Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in
fbb
BHIMA




" **ಹೆದರ್ಬೇಡ ಕಣಯ್ಯ, ಕಣ್ಮುಚ್ಕೊಂಡು ನುಗ್ಗು** "

---

ಅರಣ್ಯ ಇಲಾಖೆಯಿಂದ ಜೋಗದಲ್ಲಿ

ಐಷಾರಾಮಿ ಹೋಟೆಲ್ ಬಗ್ಗೆ ಮತ್ತೆ ಪ್ರಸ್ತಾಪನೆ



"ಪಾಪ, ೫-ಸ್ಟಾರ್ ಜನಗಳಿಗೂ ಅಲ್ಪಸ್ವಲ್ಪ ಆಸೆಗಳಿರುತ್ತಲ್ಲಾ?"

©Ashok Hemmige

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2024
**RNI NO. KAR-KAN/2005/15457**

www.mallige.com

NABH ACCREDITED
PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

**CARING AND HEALING**

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

**ನಾ. ಕಸ್ತೂರಿ ವಿಶೇಷಾಂಕ**

ಸಂಪುಟ 42
ಸಂಚಿಕೆ – 03
ಡಿಸೆಂಬರ್– 2024

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ನಾ. ಕಸ್ತೂರಿಯವರ " ಚಕ್ರದೃಷ್ಟಿ" | ಶಿವಕುಮಾರ್ | 5 |
| ಕನ್ನಡಿಗರಿಗೇ ಕನ್ನಡಕ ಹಾಕಿ..... | ಬೇಲೂರು ರಾಮಮೂರ್ತಿ | 8 |
| ಲಿಪಿ ಕಂಡು ಬೆದರಿದ ಕಪಿ | ಎಂ.ಎಸ್. ನರಸಿಂಹಮೂರ್ತಿ | 17 |
| ಕೊರವಂಜಿ – ತಿಳಿನಗೆಯಕಾರಂಜಿ | ಎಲ್.ಜಿ. ಜ್ಯೋತೀಶ್ವರ | 19 |
| ತುಂತುರು | ದಂನಆ | 20 |

### ನಾ. ಕಸ್ತೂರಿರವರ ವಿಶೇಷ ಲೇಖನಗಳು

| | |
|---|---|
| ಗುರು–ಶಿಷ್ಯ ಚಪ್ಪಾಳೆ ಪೈಪೋಟಿ | 21 |
| ಗಾಯಕಲ್ಪ | 23 |
| "ತಾರೆ" ಗಳ ಮರುಮಾತು | 27 |
| ನನ್ನ ಕುರ್ಚಿ | 29 |
| ಹುರಿಗಾಳು | 31 |
| ಶಿವನ ನಗು | 33 |
| ಹೇಗಾದರೂ ಸರಿ | 34 |
| ಧನಪಿಶಾಚಿ | 37 |
| ಷೂನಿಂದಕ್ಷೌರ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

"ಕುಟುಕಿದ ಪಿ.ಎಂ ; ಕೆರಳಿದ ಸಿ.ಎಂ"
ಆಹಾ, ಶೀರ್ಷಿಕೆ ಎಂದರೆ ಹೀಗೇ ಇರಬೇಕು !!

* * *

"ಅನ್ಯ ಭಾಷಿಕರು ಕನ್ನಡ ಕಲಿಯಲಿ"
ಹೇಳಿಕೆ
"ಭಾಷೆಗೆ ಎಲ್ಲೆ ಇಲ್ಲ"
ಸುಧಾ ಮೂರ್ತಿ
ಒಂದೇ ಪತ್ರಿಕೆಯಲ್ಲಿ ಎರಡು ಅಭಿಪ್ರಾಯಗಳು !!

* * *

ವಿಮಾನದಲ್ಲಿ ಬಂದು, ಕಾರುಗಳ ಕಳ್ಳತನ
ಪತ್ರಿಕೆ
ಓಹೋ ಪ್ರಗತಿ ಎಂದರೆ ಇದೇ ಇರಬೇಕು !!

* * *

ಕ್ರಿಕೆಟ್; ಪಾಕಿಸ್ತಾನ ಪ್ರವಾಸ ಇಲ್ಲ
ಬಿ ಸಿ ಸಿ ಐ
ಹಗೆತನದ ಹೊಗೆ ಕ್ರೀಡೆಗೂ ಹರಡಿತೇ !??

* * *

ಕರ್ನಾಟಕದ ಮದ್ಯ ವರ್ತಕರಿಂದ 700 ಕೋಟಿ ಸುಲಿಗೆ
ಮಾಡಿದ ಕಾಂಗ್ರೆಸ್ ; ಪ್ರಧಾನಿ ಆರೋಪ
"ಮದ್ಯದ" ವಿಷಯದಲ್ಲಿ "ಮಧ್ಯಸ್ಥರ" ಪಾತ್ರ ?!

* * *

ದೇಶದಲ್ಲಿ ಯಾರೂ ಸಂತೋಷವಾಗಿಲ್ಲ
ಪತ್ರಿಕೆ
ನನ್ನ ಬಳಗ ಹಾಗೂ ಓದುಗರನ್ನು ಕೇಳಿ ನೋಡಿ ಅಂತ
ಅಪರಂಜಿ ನಕ್ಕಳಂತೆ !!

* * *

ಮುಖ್ಯ ಮಂತ್ರಿಯವರಿಗೆ ಸಮೋಸ ;
ಹಿಮಾಚಲ ಸುದ್ದಿ
ಪಾಪ, ಖಾರ ಹೆಚ್ಚಾಯಿತೇನೋ ?

* * *

ಶ್ವೇತ ಭವನದಲ್ಲಿಅಧಿಕಾರ ಹಸ್ತಾಂತರ ಶಾಂತವಾಗಿ ಆಗಲಿ
ಎಂದು ಅಪರಂಜಿ ಬೇಡಿಕೊಂಡಳಂತೆ !!

* * *

●

**ಶಿವಕುಮಾರ್**

# "ನಮ್ಮ ನಿಮ್ಮಲ್ಲಿ"

ಕೊರವಂಜಿಯ ಹುಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೀ ನಾ.ಕಸ್ತೂರಿಯವರೊಂದಿಗೆ ನಮ್ಮ ತಂದೆ ರಾ.ಶಿ.ಯವರ ಒಡನಾಟ ಪ್ರಾರಂಭವಾದದ್ದು ನಲವತ್ತನೆಯ ಇಸವಿಯ ಸುಮಾರಿನಲ್ಲಿ. ಆ ದಿನಗಳಲ್ಲಿ ರಾ.ಶಿ.ಯವರು ವಾರಕ್ಕೊಮ್ಮೆ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್ಲಿಗೆ ಭೇಟಿ ನೀಡಿ ಅಲ್ಲಿನ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸುತ್ತಿದ್ದರು. ವಿದ್ಯಾರ್ಥಿಗಳೊಂದಿಗಿನ ಒಡನಾಟ ರಾ.ಶಿ.ಯವರಿಗೆ ಬಹು ಅಪ್ಯಾಯಮಾನ. ದೈಹಿತ ಪರಿಶೀಲನೆ ನಡೆಸುತ್ತಿರುವಂತೆಯೇ ನಗೆ ಚಟಾಕಿಗಳೂ ರಾ.ಶಿ.ಯವರಿಂದ ನಿರ್ಗಳವಾಗಿ ಹರಿದುಬರುತ್ತಿತ್ತು. ಇದರಿಂದಾಗಿ ಡಾಕ್ಟರು ಬಂದರೆಂದರೆ ಆರೋಗ್ಯವಾಗಿರುವ ಹುಡುಗರೂ ಅವರ ಬಳಿ ಬಂದು ನಿಂತು ಅವರ ಹೈ ವೋಲ್ಟೇಜ್ ಮಾತುಕತೆಗಳಲ್ಲಿ ಭಾಗವಹಿಸುವುದು ವಾಡಿಕೆಯಾಗಿತ್ತು. ಹೀಗೆ ಬಂದು ನಿಲ್ಲುತ್ತಿದ್ದ ಹುಡುಗ ಪಾಳ್ಯದಲ್ಲಿ ಇದ್ದ ಒಬ್ಬ ಹುಡುಗ ನಾರಾಯಣ ಮೂರ್ತಿ. ಒಮ್ಮೆ ರಾ.ಶಿ.ಯವರು ಕಾನಕಾನಹಳ್ಳಿಯಲ್ಲಿ ನಡೆದ ಕೋಮು ಗಲಭೆಯನ್ನು ಕುರಿತು ಹೇಳುತ್ತಾ, "ಇನ್ನು ಮೇಲೆ ಈ ಹಳ್ಳಿಯನ್ನು ಖಾನ್ ಖಾನ್ ಹಳ್ಳಿ ಎಂದೇ ಕರೀಬೇಕಲ್ವೇ ?" ಎಂದು ಉದ್ಗರಿಸಿದಾಗ, ನಾರಾಯಣ ಮೂರ್ತಿ, "ನಮ್ಮ ತಂದೆ ಕೂಡಾ ನಿಮ್ಮ ತರಹ ಮಾತಾಡ್ತಾರೆ. ನೀವು ಅವರನ್ನ ಭೇಟಿ ಆಗಬೇಕು" ಅಂತ ಹೇಳಿದನಂತೆ. "ಯಾರು ನಿಮ್ಮ ತಂದೆ?" ಅಂತ ಪ್ರಶ್ನಿಸಿದಾಗ "ಅವರು ನಾ. ಕಸ್ತೂರಿ ಅಂತ. ಮೈಸೂರಿನ ಮಹಾರಾಜಾ ಹೈಸ್ಕೂಲಿನಲ್ಲಿ ಅಧ್ಯಾಪಕರು." ಅಂತ ಉತ್ತರ ಬಂತು. ಸರಿ, ಮಾರನೆಯ ದಿನ ಭಾನುವಾರ ರಾ.ಶಿಯವರು ನಾರಾಯಣ ಮೂರ್ತಿಯನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಮೈಸೂರಿಗೆ ಪ್ರಯಾಣ ಬೆಳೆಸಿದರು.

ಇಂಗ್ಲೀಷಿನ ನಗೆ ಪತ್ರಿಕೆ ಪಂಚ್, ರಾ.ಶಿ.ಯವರ ವಿದ್ಯಾರ್ಥಿದೆಸೆಯಿಂದಲೇ ಅವರ ಮೇಲೆ ಬಹುವಾಗಿ ಪ್ರಭಾವ ಬೀರಿತ್ತು. ಕನ್ನಡದಲ್ಲಿ ಇಂತಹ ಒಂದು ಪತ್ರಿಕೆಯನ್ನು ಹೊರತರಲು ರಾ.ಶಿ..ಯವರು ಉತ್ಸುಕರಾಗಿದ್ದರು. ಕಸ್ತೂರಿಯವರೊಂದಿಗಿನ ಭೇಟಿ, ಈ ಉತ್ಸಾಹಕ್ಕೆ ಒಂದು ಮೂರ್ತಸ್ವರೂಪವನ್ನು ಕೊಟ್ಟಿತು. ಇಬ್ಬರು ಸಮಾನಮನಸ್ಕರ ಅವಿತರ ಶ್ರಮದಿಂದ 1942ನೆಯ ಮಾರ್ಚ್ ಹದಿನಾರರಂದು ಕೊರವಂಜಿಯ ಮೊದಲ ಸಂಚಿಕೆ ಮಾರುಕಟ್ಟೆಗೆ ಬಿಡುಗಡೆಯಾಯಿತು.

ಕೊರವಂಜಿಯ ಮೊದಲ ಸಂಚಿಕೆಯಿಂದಲೇ ನಾ.ಕಸ್ತೂರಿಯವರು ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಪ್ರಾರಂಭದ ದಿನಗಳಲ್ಲಿ ಕಸ್ತೂರಿ ಮತ್ತು ರಾ.ಶಿ. ಇವರಿಬ್ಬರೇ ವಿವಿಧ ಕಾವ್ಯನಾಮಗಳಲ್ಲಿ ಹಲವಾರು ಲೇಖನಗಳನ್ನು ಬರೆದು ಪುಟಗಳನ್ನು ಹೊಂದಿಸುತ್ತಿದ್ದರು. ಕಸ್ತೂರಿಯವರು, ಖಾರಾಂತ, ನಾ.ಕ., ಪಾಟಾಳಿ ಇವೇ ಮುಂತಾಗಿ ಹತ್ತು ಹಲವಾರು ಹೆಸರುಗಳಡಿಯಲ್ಲಿ ಬರಹಗಳನ್ನು ಹೊಂದಿಸುತ್ತಿದ್ದರು. ಕೊರವಂಜಿಗೆ ವ್ಯಂಗ್ಯಚಿತ್ರಗಳನ್ನು ಒದಗಿಸುವ ಪ್ರಯತ್ನದಲ್ಲಿ ಕಸ್ತೂರಿಯವರ ಪಾತ್ರ ಹಿರಿದು. ತಮ್ಮ ವಿದ್ಯಾರ್ಥಿ ಆರ್. ಕೆ. ಲಕ್ಷ್ಮಣ್ ಅವರ ಮನವೊಲಿಸಿ ಪತ್ರಿಕೆಯ ಮೊದಲ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಲಕ್ಷ್ಮಣ್‌ರಿಂದ ನೂರಾರು ವ್ಯಂಗ್ಯ ಚಿತ್ರಗಳನ್ನು ಬರೆಸಿದ್ದು ನಾ.ಕಸ್ತೂರಿ.

ರಾ.ಶಿ. ಮತ್ತು ಕಸ್ತೂರಿ ಅವರ ಪ್ರಥಮ ಪರಿಚಯ ಕ್ರಮೇಣ ಆಪ್ತ ಗೆಳೆತನವಾಯಿತು. ನಮ್ಮ ಅಕ್ಕ ವಿಮಲಾ, ಹಲವಾರು ತಿಂಗಳುಗಳ ಕಾಲ ಮೈಸೂರಿನಲ್ಲಿದ್ದ ಕಸ್ತೂರಿಯವರ



ಶ್ರೀ, ನಾ.ಕಸ್ತೂರಿ ಮತ್ತು ಶ್ರೀಮತಿ ರಾಜಮ್ಮ

ಮನೆಯಲ್ಲೇ ಇದ್ದುಬಿಟ್ಟಿದ್ದಳು. ಹೇಗೂ ಕಸ್ತೂರಿಯವರ ಮಗಳು ಪದ್ಮಾ ತನ್ನ ಪೆಟ್ ಫ್ರೆಂಡ್ ತಾನೇ. ಹಾಗಾಗಿ ಅನೇಕ ತಿಂಗಳುಗಳ ನಂತರ ವಿಮಲಾ ಮನೆಗೆ ಹಿಂತಿರುಗಿದಾಗ ನಾನು ಅವಳನ್ನ "ಮೈಸೂರಕ್ಕ" ಎಂದೇ ಕರೆಯಲು ಪ್ರಾರಂಭಿಸಿದ್ದೆ.

1947ರಲ್ಲಿ ನಮ್ಮ ನಾಡಿಗೆ ಸ್ವಾತಂತ್ರ ದೊರಕಿದಾಗ, ಕಸ್ತೂರಿಯವರ ಪುತ್ರ ಅದ್ರಿ, ಕೊರವಂಜಿಯ ವಿಶೇಷ ಸಂಚಿಕೆಗೆ "ನವಭಾರತ ಕಲ್ಪದ್ರುಮ"

ಎಂಬ ವ್ಯಂಗ್ಯ ಚಿತ್ರವನ್ನು ಬರೆದದ್ದು ಇಂದಿಗೂ ನನ್ನ ನೆನಪಿನಲ್ಲಿದೆ. ದುರದೃಷ್ಟವೆಂದರೆ ಇದಾದ ಒಂದು ವರ್ಷಕ್ಕೆ ಅದ್ರಿ ನಮ್ಮನ್ನಗಲಿದ. ಕಸ್ತೂರಿ ದಂಪತಿಗಳಿಗೆ ಸಹಜವಾಗಿಯೇ ಇದೊಂದು ಬಹು ದೊಡ್ಡ ಆಘಾತವಾಯಿತು. ಅಂದಿನಿಂದ ಕಸ್ತೂರಿಯವರ ಹಾಸ್ಯ ಸಾಹಿತ್ಯ ರಚನೆ ಕುಂಠಿತಗೊಂಡಿತು. ಇದೇ ಸುಮಾರಿನಲ್ಲಿ ಕಸ್ತೂರಿ ದಂಪತಿಗಳು ಪುಟ್ಟಪರ್ತಿಯಲ್ಲಿನ ಶ್ರೀ ಸಾಯಿಬಾಬ ಆಶ್ರಮಕ್ಕೆ ಭೇಟಿಕೊಡುವ ಪ್ರಸಂಗವೊದಗಿತು. ಬಹು ಕಾಲದ ನಂತರ ಅವರು ನಮ್ಮ ತಂದೆಯವರೊಂದಿಗೆ ಈ ಕುರಿತು ಮಾತನಾಡುತ್ತಿದ್ದಾಗ, "ಬಿರುಗಾಳಿಯಲ್ಲಿ ತತ್ತರಿಸುತ್ತಿದ್ದ ನೌಕೆಯನ್ನು ಒಂದು ಶಾಂತ ಬಂದರಿಗೆ ತಂದು ನಿಲ್ಲಿಸಿದರು ನನ್ನ ಸ್ವಾಮಿ" ಎಂದು ತಮ್ಮ ಪುಟ್ಟಪರ್ತಿಯ ಅನುಭವವನ್ನು ವಿವರಿಸಿದ್ದರು.

ಇದಾದ ನಂತರ ಕಸ್ತೂರಿಯವರು ರಚಿಸಿದ ವಿಪುಲ ಸಾಹಿತ್ಯವೆಲ್ಲಾ ಸಾಯಿಚಿಂತನೆಯ ಸೆಲೆಯಿಂದ ಚಿಮ್ಮಿದ ಸಾಹಿತ್ಯಚಿಲುಮೆ. 1996ರಲ್ಲಿ ನಾವು ನಮ್ಮ ಮೊದಲ ಹಾಸ್ಯೋತ್ಸವವನ್ನು ನಾ.ಕಸ್ತೂರಿಯವರ ನೆನಪಿನಲ್ಲಿ ನಡೆಸಲು ನಿರ್ಧರಿಸಿದಾಗ ಕಸ್ತೂರಿಯವರ ಮೊಮ್ಮಗ ಶ್ರೀ ರಾಜಾರಾವ್ ಅವರನ್ನು ಭೇಟಿಮಾಡುವ ಸುಯೋಗ ದೊರಕಿತು. ಈಗ ಅವರು ನಾ.ಕಸ್ತೂರಿ ಹಾಸ್ಯರಸಿಕ ವೃಂದ ಎಂಬ ಹೆಸರಿನ ಬಳಗವೊಂದನ್ನು ವಾಟ್ಸಪ್‌ನಲ್ಲಿ ಹುಟ್ಟಿಹಾಕಿದ್ದಾರೆ. ಇದರ ಮೂಲಕ ನಾ. ಕಸ್ತೂರಿಯವರ ಸದಭಿರುಚಿಯ ಹಾಸ್ಯ ಎಲ್ಲರನ್ನೂ ಸೇರುವಂತಾಗಲಿ ಎಂಬುದೇ ನನ್ನ ಹಾರೈಕೆ.



' ನವಭಾರತ ಕಲ್ಪದ್ರುಮ '

■

# ನಾ. ಕಸ್ತೂರಿಯವರ " ಚಕ್ರದೃಷ್ಟಿ"

✍ಶಿವಕುಮಾರ್

ಚಿಕ್ಕಂದಿನಲ್ಲಿ ನಾವು ಹಲವಾರು ಪುಸ್ತಕಗಳನ್ನು ಓದಿದ್ದರೂ ಅವುಗಳಲ್ಲಿ ಬೆರಳೆಣಿಕೆಯಷ್ಟು ಪುಸ್ತಕಗಳು ನಮ್ಮ ಮೇಲೆ ಬಹುವಾಗಿ ಪ್ರಭಾವಬೀರಿ, ಅವುಗಳ ನೆನಪು ಜೀವನದುದ್ದಕ್ಕೂ ಉಳಿದು ಬಿಡುತ್ತವೆ. ಎ.ಆರ್. ಕೃಷ್ಣಶಾಸ್ತ್ರಿಗಳ "ವಚನ ಭಾರತ", ರಾಜರತ್ನಂ ಅವರ ಅನೇಕ ಮಕ್ಕಳ ಪುಸ್ತಕಗಳು, ಕಾರಂತರ "ಔದಾರ್ಯದ ಉರುಳಲ್ಲಿ", ಕುವೆಂಪು ರವರ "ಮಲೆನಾಡಿನ ಚಿತ್ರಗಳು" ಮತ್ತು ಇನ್ನೂ ಹಲವು ಪುಸ್ತಕಗಳು ಅವುಗಳ ಯಾವುದೋ ವಿಶಿಷ್ಟ ಗುಣದಿಂದ ಮತ್ತೆ ಮತ್ತೆ ನೆನಪಿಗೆ ಬಂದು ಅವುಗಳಲ್ಲಿನ ಸನ್ನಿವೇಶಗಳನ್ನು ಸದಾ ಜೀವಂತವಾಗಿಟ್ಟಿರುತ್ತವೆ. ಇಂತದ ನಿತ್ಯಹರಿದ್ವರಣದ ಪುಸ್ತಕಗಳ ಸಾಲಿನಲ್ಲಿ ಉಜ್ವಲವಾಗಿ ಬೆಳಗುವ ಪುಸ್ತಕ, ನಾ. ಕಸ್ತೂರಿಯವರ "ಚಕ್ರದೃಷ್ಟಿ"

ಚಕ್ರದೃಷ್ಟಿ ಪುಸ್ತಕವನ್ನು ನಾನು ಮೊದಲು ಓದಿದ್ದು ಐವತ್ತರ ದಶಕದಲ್ಲಿ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ. ಆಗಿನ ದಿನಗಳಲ್ಲಿ ನಾ.ಕಸ್ತೂರಿಯವರು ಹಾಸ್ಯಸಾಹಿತಿಯೆಂದೇ ಖ್ಯಾತರಾಗಿದ್ದರು. ಕೊರವಂಜಿಯಲ್ಲಿ ಅವರ ಬರಹಗಳನ್ನು  ಬೇರೆ ಬೇರೆ ಹೆಸರುಗಳಲ್ಲಿ ಪ್ರತಿ ತಿಂಗಳೂ ಕಾಣಬಹುದಾಗಿತ್ತು. ಹಾಗಾಗಿ ಚಕ್ರದೃಷ್ಟಿ ಒಂದು ನಗೆ ಕಾದಂಬರಿಯೆಂದು ಭಾವಿಸಿ ಅದನ್ನು ಬಹು ಉತ್ಸಾಹದಿಂದ ಓದಲು ಕೈಗೆತ್ತಿಕೊಂಡೆ. ಬಹು ಬೇಗ ಅದರಲ್ಲಿದ್ದ ನಗೆಯುಕ್ಕಿಸಿ ಚಟಪಟಿಸುವ ಸಂಭಾಷಣೆಗಳ ಹಿಂದೆ ಒಂದು ಕರುಳು ಹಿಂಡುವ ವಿಷಾದದ ಕಥೆಯ ನಿರೂಪಣೆ ಪದರ ಪದರವಾಗಿ ತೆರೆದುಕೊಂಡಿತು. ವಿಷಾದವೆಂದು ಪುಸ್ತಕವನ್ನು ಪಕ್ಕಕ್ಕಿಡಲೂ ಮನಸ್ಸಿಲ್ಲ. ಹಾಗೂ ಹೀಗೂ ಭಾರವಾದ ಮನಃ ಸ್ಥಿತಿಯಿಂದಲೇ ಪುಸ್ತಕವನ್ನು ಓದಿ ಮುಗಿಸಿ, ಮತ್ತೆ ಅದನ್ನು ಓದಬಾರದೆಂದು ನಿರ್ಧರಿಸಿ ಪುಸ್ತಕವನ್ನು ಪಕ್ಕಕ್ಕಿಟ್ಟೆ. ಆದರೂ ಅಂದಿನ ಕಾಲಘಟ್ಟದ ಜೀವನಶೈಲಿಯ ಕಹಿಸತ್ಯಗಳು ಪದೇ ಪದೇ ಮನಸ್ಸನ್ನು ಕಲಕುತ್ತಿದ್ದವು. ಈ ಕಹಿಸತ್ಯಗಳನ್ನು ಒಂದು ಪ್ರೌಢ ನಗೆದೃಷ್ಟಿಯಿಂದ ಓದುಗನಿಗೆ ಉಣಬಡಿಸಿರುವುದು ಕಸ್ತೂರಿಯವರ ಪ್ರತಿಭೆಗೆ ಸಾಕ್ಷಿ.

ಈ ಕಿರುಕಾದಂಬರಿಯ ಹೀರೋ ಗುಂಡಪ್ಪ. ಈ ಗುಂಡಪ್ಪನ ಜೀವಯಾತ್ರೆಯ ಮಜಲುಗಳನ್ನು ಬಹು ನವಿರಾಗಿ ರೂಪಿಸಲು ಲೇಖಕರು ಬಳಸಿರುವ ತಂತ್ರವೆಂದರೆ, ಅವನ ಸುತ್ತಲಿನ ಬಂಧುಮಿತ್ರರನ್ನು ಸಂದರ್ಶಿಸುವ ಮೂಲಕ.

ಮೊಟ್ಟಮೊದಲ ಸಂದರ್ಶನ ಗುಂಡಪ್ಪನ ಆಫೀಸರ್. ಅಂದಹಾಗೆ ಪ್ರತಿಯೊಂದು ಸಂದರ್ಶನಕ್ಕೂ ಒಂದೊಂದು ರಾಗದ ಅಪಭ್ರಂಶ ಹೆಸರು. ಆಫೀಸರ್ ಸಂದರ್ಶನಕ್ಕೆ ಕರಕರಪ್ರಿಯ ಎಂಬ ಶೀರ್ಷಿಕೆ.  ಗುಂಡಪ್ಪನ ಬಗ್ಗೆ ಹೇಳುತ್ತ, ಆಫೀಸರ್ ಹೀಗೆನ್ನುತ್ತಾರೆ.

"ಗುಂಡಪ್ಪ ಏನು ಹೇಳಿದ ಗೊತ್ತೆ, ಅವನ ಮನೆಯಲ್ಲಿ ಕೆಲಸಮಾಡುವ ಜವಾನನ ಹತ್ತಿರ ? ಅವನೇನೋ ಮಾತಿಗೆ ಮಾತು ಬಂದು" ಸಾಹೇಬರು ತಮ್ಮ ಬೂಟ್ಸಿಗೆ ಪಾಲಿಶ್ ಹಾಕುವುದಿಲ್ಲ" ಅಂದನಂತೆ. ಆಗ ಇವನು ಈ ವಿಷಸರ್ಪ ಈ ಧೂರ್ತ, " ಮತ್ತೆ ಯಾವ ಸಾಹೇಬರ ಬೂಟ್ಸಿಗೆ ಪಾಲಿಷ್ ಹಾಕ್ತಾರೆ?" ಅಂದನಂತೆ. ಹೇಗಿದೆ ಇವನ ನಾಲಿಗೆ ಹರಿತ ?

ಮುಂದಿನ ಸಂದರ್ಶನ ಗುಂಡಪ್ಪನ ಸಹೋದ್ಯೋಗಿ ಕಾಶಿಪತಯ್ಯನೊಂದಿಗೆ. ಈ ಸಂದರ್ಶನದ ಹೆಸರು ಕದನ ಕುತೂಹಲ. ಈತನಿಗೆ ತನ್ನ ಜೊತೆಗೇ ಬೆಳೆದ ಗುಂಡಪ್ಪ ಬಿ.ಎ. ಪಾಸುಮಾಡಿ ತನಗಿಂತ ಎತ್ತರದ ಹುದ್ದೆಯಲ್ಲಿರುವುದನ್ನು ಕಂಡು

ಮೈಯ್ಯೆಲ್ಲಾ ಉರಿ.



ಬಿ.ಎ. ಬಿ.ಎ ಅಂತ ಜಂಭ ಬೇರೆ ಇವನಿಗೆ. ಊರಿಗೊಬ್ಬಳೇ ಪದ್ಮಾವತಿ. ಮೂರು ಹೊತ್ತೂ ಕೈಯ್ಯಲ್ಲೊಂದು ಪುಸ್ತಕ, ಈ ಸರಸ್ವತಿ ಮುರುಕಿಗೆ. ಈ ಊರಿಗೆ ಹಿಂತಿರುಗಿದ ತಕ್ಷಣ ಆಗಾಗ ಒಂದೊಂದು ಇಂಗ್ಲೀಷ್ ಪುಸ್ತಕ ಹಿಡಿದುಕೊಂಡು ಬರುತ್ತಿದ್ದ. ಈಗ ಸಂಪೂರ್ಣ ಕನ್ನಡಕ್ಕೆ ಇಳಿದಿದ್ದಾನೆ. ನಮ್ಮೂರು ಲೈಬ್ರರಿಯಲ್ಲಿರುವುದೊಂದೂ ಬೇಡವಂತೆ ಅವನಿಗೆ. ತಾನೇ ಕಾಸುಕೊಟ್ಟು ಕೊಳ್ಳಬೇಕಂತೆ. ಹೇಗಿದೆ ಚಟ ? ನಾವೆಲ್ಲ ಪುಸ್ತಕ ಓದದೇ ಕಾಲಕಳೆಯುತ್ತಿಲ್ಲವೇನು?

ಗುಂಡಪ್ಪನ ಆಫೀಸಿನ ಜವಾನ ಈರ ತನ್ನ ಕಥನವನ್ನು ಈರವಾಣಿಯಲ್ಲಿ ಬಿಚ್ಚಿಡುತ್ತಾನೆ. ಪ್ರಾರಂಭ ಇಲ್ಲಿ ನೋಡಿ.

ಬಿಡಿ ಬುದ್ಧಿ, ಗುಂಡಪ್ಪಾವರನ್ನ ನಾ ಕಾಣೆನೇ ? ಈ ಆಫೀಸಿನೊಳಗೆ ಅವರು ಕಾಲಿಟ್ಟು ಆರು ವರ್ಷ ಆಯಿತು ಅಷ್ಟೇನೇ...... ಈಚಿನ ಸಾಹೇಬರು ದಪ್ಪನೆಯವರು. ಹಿಂದಿನವರು ನನ್ನ ಸೈಜಿನವರೇ ಇದ್ದರು. ನನಗೆ ಖುಷಿಯಾಗಿತ್ತು. ಅವರು ಅಂಗಿ ಷರಾಯಿ ಕೊಟ್ಟರೆ ನಾನೇ ಹೊಲಿಸಿಕೊಂಡಹಾಗಿರುವುದು, ಬುದ್ಧೀ ! ಸರ್ಕಾರದವರು ಆಫೀಸರುಗಳನ್ನ ವರ್ಗಮಾಡುವಾಗ ಆಯಾ ಕಡೆ ಇರುವ ಜವಾನರ ಸೈಜುವಾರು ಚುನಾಯಿಸಿ ಉಪಕಾರಮಾಡಬಾರದಾ ಅಂತೀನಿ ?

ಗುಂಡಪ್ಪನ ತಾಯಿ ಸೀತಮ್ಮ ಹಾಡುವ ಶುದ್ಧ ಸಾವೇರಿಯಲ್ಲಿ ಆಕೆ ತನ್ನ ಮೊದಲ ನಾಲ್ಕು ಮಕ್ಕಳನ್ನು ಕಳೆದುಕೊಂಡಾಗಿನ ಸನ್ನಿವೇಶದ ನಿರೂಪಣೆಯನ್ನು ಇಲ್ಲಿ ನೋಡಿ.

ಒಂದು ಎರಡು ಮೂರು ನಾಲ್ಕು ಅಂತ ಕಿತ್ತುಕೊಂಡು ಹೋದ ಕಂದಗಳನ್ನ. ನನ್ನ ಹಾಳು ಹೊಟ್ಟೆಯನ್ನು ನಾನು ಕಿವುಚಿಕೊಂಡದ್ದು ಸಾಲದೆ ಹೋದರೆ ನಮ್ಮ ಅತ್ತೆ ಬೇರೆ, ಉರಿಯುವ ಬೆಂಕಿಗೆ ತಿದಿ ಒತ್ತುವರು: ಇಷ್ಟಾದರೂ ಬುದ್ಧಿ ಬರಲಿಲ್ಲವೇನೋ ? ವಂಶಕ್ಕೊಂದು ಬಿದಿರಿನ ಕೋಲೂ ಇಲ್ಲವಲ್ಲೋ ! ಹೋಗಿ ನೋಡೋ ಎಲ್ಲಾದರೂ ! ಶಾಸ್ತ್ರಿಗಳಿಗೂ ಹೇಳಿದ್ದೇನೆ ಕಣೋ ! ನಿನ್ನ ವೈದ್ಯಕ್ಕೆ ಜಗ್ಗುವುದಿಲ್ಲ ಇವಳ ರೋಗ ! ಭೂತವೋ ಪ್ರೇತವೋ ಇರಬೇಕು ಅಂತ ಗಂಟೆಗಂಟೆಗೂ ಒಡಕು ಶಬ್ದ ನುಡಿಯುವರು."

ಹೀಗೆ ವಿವಿಧ ಕಥನಗಳು ಮುಂದುವರಿಯುತ್ತಾ ಹೋಗುತ್ತವೆ. ಗೆಳೆಯ ಹಾಡುವ ಸ್ನೇಹಪ್ರಭಾ, ಗುರುಗಳು ಹೇಳುವ ಮಾಯಾಮಾಳವ ಗೌಳ, ಇತ್ಯಾದಿಗಳು ಗುಂಡಪ್ಪ ಕಷ್ಟಗಳ ಬೇಗೆಯಲ್ಲಿ ಬೇಯುತ್ತಿದ್ದರೂ ತನ್ನ ಮೌಲ್ಯಗಳನ್ನು ತ್ಯಜಿಸದೆ ಸ್ಥೈರ್ಯದಿಂದ ಜೀವನ ಸಾಗಿಸುತ್ತ ಬರುವುದನ್ನು ಅತ್ಯಂತ ಹೃದಯಂಗಮವಾಗಿ ನಮ್ಮ ಮುಂದಿಡುತ್ತವೆ.

ಕೊನೆಯ ಸಹನ ರಾಗ ಅವನ ಪತ್ನಿಯದ್ದು. ಅದರಲ್ಲಿ ಗುಂಡಪ್ಪ ತನ್ನ ಕಷ್ಟಕೋಟಲೆಗಳನ್ನು

ಇದಿರಿಸಲು ಅಧ್ಯಾತ್ಮದಲ್ಲಿ ಸಾಂತ್ವನ ಪಡೆಯುವ ಸಂಗತಿಯನ್ನು ತಿಳಿಸುತ್ತಾಳೆ.

"ಮರುದಿನ ಅವರದು ಟಪಾಲ್ ದಿನ !" ಮಾರುತಿಯ ಉತ್ತರಗಳು ಬರುವ ದಿನ.." ಬಾ ! ನೀನೂ ಮರ ಹತ್ತಿಬಿಡು ! ಗಾಳಿಯಲ್ಲಿ ಇಬ್ಬರೂ ತೇಲಿ ಹೋಗುವಾ" ಅಂತ ಬರೆದೇ ಇರುತ್ತದೆ ಅಂತ ಇದ್ದೆ. ಅವತ್ತಿನ ದಿವಸ "ಸೌದೆ ತರುವುದಕ್ಕೆ ಕಾಡಿಗೆ ಹೋಗುತ್ತೇನೆ, ಕೊಡಲಿ ಕೊಡು" ಅಂತ ಸತ್ಯವಾನ ಕೇಳಿದಾಗ ಸಾವಿತ್ರಿಗೆ ಆದ ಸಂಕಟ, ನನಗೂ ಆ ದಿನ ಇವರು " ಪೋಸ್ಟಾಫೀಸಿಗೆ ಹೇಗಬೇಕು. ಟವಲು ಕೊಡು " ಅಂದಾಗ ಉಂಟಾಯಿತು.

ರಾಮಜಪವನ್ನು ಮಾತ್ರ ನಾನು ಬಿಡಲಿಲ್ಲ. ಗಾಜೊಡೆದರೂ ಪಠ ಇತ್ತಲ್ಲ. ಅದನ್ನೇ ಮಡಿಲಿನಲ್ಲಿ ಇರಿಸಿಕೊಂಡು ತಲೆ ನೋವು ಅಂತ ಅತ್ತೆಗೆ ಸುಳ್ಳು ಹೇಳಿ ದೇವರ ಕೋಣೆಯಲ್ಲಿ ಕುಳಿತಿದ್ದೆ. ....ಟಪಾಲು ತಂದರು.....ಬಾಗಿಲು ಹಾಕಿಕೊಂಡರು.... ಒಳಗಿನಿಂದ "ಉಸ್ಸಪ್ಪ" ಅಂತ ಒಂದು ನಿಟ್ಟುಸಿರು ಕೇಳಿಸಿತು. ! "ಇಲ್ಲ ! ಇನ್ನುಮೇಲೆ ಇಲ್ಲ ! ಆಯಿತು ! ಮುಗಿಯಿತು !" ಅಂತ ಗಟ್ಟಿಯಾಗಿ ಹೇಳಿಕೊಂಡರು.....ನನಗೆ ಎದೆ ಒಡೆದುಹೋಯಿತು. "ಸನ್ಯಾಸವೇ ಸಿದ್ಧ" ಅಂತ ತೀರ್ಮಾನಿಸಿದೆ.

ಆದರೆ ಶ್ರೀರಾಮ ಕಾಪಾಡಿದ. ಕಾಗದ ಬಂದು ಈಗ ಹತ್ತು ಹನ್ನೆರಡು ದಿನಗಳಾಗಿವೆ. ಈಗ ಎಷ್ಟೋ ಗೆಲುವಾಗಿದ್ದಾರೆ. ಆಂಜನೇಯನ ಪೂಜೆ ಮಾತ್ರ ನಡೆಯುತ್ತಿದೆ; ಆದರೆ ಹಿಂದಿನಷ್ಟು ಮಂತ್ರದ ಆರ್ಭಟವಿಲ್ಲ. ಗುರು ಗುರು ಪತ್ನಿ ಮುಂತಾದ ಮಾತುಗಳು ನಿಂತಿವೆ. ಊಟ ತಿಂಡಿಗಳಲ್ಲಿ ಅಭಿರುಚಿ ತೋರಿಸುತ್ತಿದ್ದಾರೆ. ಉಪ್ಪು ಖಾರ ಹೆಚ್ಚಿದರೆ ಕಡಿಮೆ ಇದ್ದರೆ ಟೀಕಿಸುತ್ತಾರೆ. ನನ್ನನ್ನೂ ನಗಿಸುತ್ತಾರೆ: ಹಾಸ್ಯ ಮಾಡುತ್ತಾರೆ. "ಮಗೂನ ಅರ್ಜುನ ಅಂತ ಕರೆದೇ ಬಿಡೋಣ ಅಲ್ಲವೇನೆ" ಅಂತ ಹೇಳಿದರು, ನಿನ್ನೆ ರಾತ್ರಿ....

ಈ ಕಿರು ಕಾದಂಬರಿಯಲ್ಲಿಯ ಎಲ್ಲ ಪಾತ್ರಗಳೂ ನೈಜತೆಯನ್ನು ಬಿಂಬಿಸುತ್ತವೆ. ಇದರಲ್ಲಿನ, ಚಾಡಿಪತಿರಾಯ, ಜ್ವರದೃತು, ಕ್ಲಿಷ್ಟರಾಯರು, ಮುಂತಾದ ಪದಪ್ರಯೋಗಗಳು ಬಹು ಸುಲಲಿತವಾಗಿ ಮೂಡಿಬಂದಿವೆ. ಒಂದು ಸಂವೇದನಾಶೀಲ, ಸಂಕೀರ್ಣ ವ್ಯಕ್ತಿತ್ವವನ್ನ ಎಲ್ಲ ದೃಷ್ಟಿಕೋನಗಳಿಂದಲೂ ವೀಕ್ಷಿಸಿ, ಒಂದು ಸುಂದರ ಮೂರ್ತಿಯನ್ನು ಕಡೆಯುವ ಸಾಹಸವನ್ನು ಈ ಚಕ್ರದೃಷ್ಟಿ ಕಾದಂಬರಿಯಲ್ಲಿ ಕಾಣಬಹುದು. ■



ಕನ್ನಡ ಹಾಸ್ಯ ದಿಗ್ಗಜರು

# ಕನ್ನಡಿಗರಿಗೇ ಕನ್ನಡಕ ಹಾಕಿ ಕನ್ನಡ ಕಾಣಿಸಿದ ಕಸ್ತೂರಿ

ಬೇಲೂರು ರಾಮಮೂರ್ತಿ

ನಾ. ಕಸ್ತೂರಿ (ಜನನ : 25.12.1897 – ಮರಣ 14.8.1987) ಎಂದು ಖ್ಯಾತರಾದ ನಾರಾಯಣ ರಂಗನಾಥ ಕಸ್ತೂರಿಯವರು ಹುಟ್ಟಿದ್ದು ಕೇರಳದ ತಿರುಪುನಿತ್ತೂರು ಎಂಬ ಗ್ರಾಮದಲ್ಲಿ. ಅವರ ತಂದೆ ನಾರಾಯಣ ವಕೀಲರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕಸ್ತೂರಿಯವರಿಗೆ ಕೇವಲ 6 ವರ್ಷ ವಯಸ್ಸಾಗಿದ್ದಾಗ ಅವರ ತಂದೆ ತೀರಿಕೊಂಡರು. ನಂತರ ಕಸ್ತೂರಿಯವರು ಅವರ ತಾಯಿಯ ತಂದೆ ಅಂದರೆ ಅಜ್ಜನ ಆರೈಕೆಯಲ್ಲಿ ಬೆಳೆದರು. ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಎರ್ನಾಕುಲಮ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಓದಿದರು. ನಂತರ ತಿರುವನಂತಪುರದ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು.

ತಿರುವನಂತಪುರದ ಪ್ರೌಢಶಾಲೆಯಲ್ಲಿ ಕಸ್ತೂರಿಯವರು ಅಧ್ಯಾಪಕ ವೃತ್ತಿ ಹಿಡಿದರು. ಜೊತೆ ಜೊತೆಗೆ ಸಂಜೆ ಕಾಲೇಜಿನಲ್ಲಿ ಕಾನೂನು ಓದನ್ನೂ ಮುಂದುವರಿಸಿದರು. ಅವರಲ್ಲಿ ಬರವಣಿಗೆ ಹುಚ್ಚು ಪ್ರಾರಂಭವಾದದ್ದು ಪೀಪಲ್ ಫ್ರೆಂಡ್ ಎನ್ನುವ ಪತ್ರಿಕೆಗೆ ಲೇಖನಗಳನ್ನು ಬರೆಯುವುದರ ಮೂಲಕ. ಜೊತೆಗೆ ಹೈಸ್ಕೂಲು ಮತ್ತೆ ಕಾಲೇಜಿನಲ್ಲಿ ತಾವೇ ನಾಟಕಗಳನ್ನು ಬರೆದು ಆಡಿಸುತ್ತಿದ್ದರು.

ಕಸ್ತೂರಿಯವರು ತಮ್ಮ 14ನೆ ವಯಸ್ಸಿನಲ್ಲಿಯೇ ತಂದೆಯ ತಂಗಿಯ ಮಗಳನ್ನು ಮದುವೆಯಾಗಿ ಗೃಹಸ್ಥಾಶ್ರಮಕ್ಕೂ ಕಾಲಿಟ್ಟರು. ಅವರು ಕನ್ನಡದ ಬಗೆಗೆ ಅರಿವೇ ಇರದ ದಿನಗಳಲ್ಲಿ ಅವರು ಮೈಸೂರಿನ ಡಿಬಿಸಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇರಿದರು. ಅಲ್ಲಿಂದ ಮುಂದೆ ಅವರು ಬನುಮಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾದರು. ಚರಿತ್ರೆ, ಇಂಗ್ಲಿಷ್ ಮತ್ತು ಅರ್ಥ ಶಾಸ್ತ್ರ ಬೋಧಿಸುತ್ತಿದ್ದರು. ಆಗ ಕನ್ನಡ ಕಲಿಯಲು ಪ್ರಾರಂಭಿಸಿದ ಕಸ್ತೂರಿಯವರು ಕನ್ನಡದಲ್ಲಿ ಇರುವ ಸೊಗಡನ್ನು ಈ ಹಿಂದೆ ಯಾರೂ ಅನಾವರಣಗೊಳಿಸಿರದ ರೀತಿ ಹೊರತಂದರು. ಕನ್ನಡಕ್ಕೆ ಒಂದು ಘನತೆಯನ್ನು ತಂದುಕೊಟ್ಟರು. ಕಸ್ತೂರಿಯವರು ಮೈಸೂರಿನಲ್ಲೇ ಅಲ್ಲದೇ, ಶಿವಮೊಗ್ಗ, ದಾವಣಗೆರೆ ಕಾಲೇಜಿಗಳಲ್ಲೂ ಅಧ್ಯಾಪಕ ವೃತ್ತಿ ನಡೆಸಿದರು.

ಹುಟ್ಟಿನಿಂದ ಮಲೆಯಾಳಿ ಆದರೂ ಮೈಸೂರಿಗೆ ಬಂದು ಕನ್ನಡ ಕಲಿತು ಕನ್ನಡ ಕಸ್ತೂರಿ ಎನ್ನುವುದನ್ನು ಸಾಬೀತು ಮಾಡಿದವರು ನಾ. ಕಸ್ತೂರಿಯವರು. ಕನ್ನಡವನ್ನು ಇಷ್ಟು ಶ್ರೀಮಂತವಾಗಿ ಬಳಸಬಹುದೇ ಅಂತ ಕನ್ನಡಿಗರೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ ಕೀರ್ತಿ ಕಸ್ತೂರಿಯವರದು. ಅವರು ವೃತ್ತಿ ಪ್ರಾರಂಭ ಮಾಡಿದ್ದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸದ ಉಪಾಧ್ಯಾಯರಾಗಿ. ನಂತರ ಅವರು ಕನ್ನಡ ಕಲಿತು ಕನ್ನಡ ಅಧ್ಯಾಪಕರಾದರು. ಇದರ ಜೊತೆಜೊತೆಗೆ ಅವರು ಇತರೆ ಹವ್ಯಾಸಗಳನ್ನು ಬೆಳೆಸಿಕೊಂಡು ಸುತ್ತುಮುತ್ತಲಿನವರಿಗೆ ಆತ್ಮೀಯರಾದರು. ಮೈಸೂರಿನಲ್ಲಿ ಮೊಟ್ಟ ಮೊದಲು ಆಕಾಶವಾಣಿ ಕೇಂದ್ರವೊಂದನ್ನು ಪ್ರಾರಂಭಿಸಲಾಯಿತು. ಅದರ ವಿವರ ಹೀಗಿದೆ. ಮೈಸೂರಿನಲ್ಲಿ ಶ್ರೀ ಎಂ. ವಿ. ಗೋಪಾಲಸ್ವಾಮಿಯವರು, ಶ್ರೀಸಾಮಾನ್ಯನಿಗೆ ಶಿಕ್ಷಣ ಎಂಬ ಒಂದು ಅವಧಿಯ ಕಾರ್ಯಕ್ರಮವನ್ನು ಪ್ರಾರಂಬಿಸಬೇಕು ಅಂತ ಹಂಬಲಿಸಿದ್ದರು. ಮೈಸೂರು ನಗರಪಾಲಿಕೆಯವರು ಕೊಟ್ಟ ಅನುದಾನದಿಂದ

ಮತ್ತು ಗೋಪಾಲಸ್ವಾಮಿಯವರು ಹಾಲೆಂಡಿನಿಂದ ತಂದ ಒಂದು ಟ್ರಾನ್ಸ್‌ಮಿಟರ್ ಸಹಾಯದಿಂದ ಕೆಲಸ ಪ್ರಾರಂಭವಾಯಿತು. ಆದರೆ ಈ ಕೇಂದ್ರಕ್ಕೆ ಏನು ಹೆಸರಿಡಬೇಕು ಎನ್ನುವ ಜಿಜ್ಞಾಸೆ ಮೂಡಿದಾಗ ಕಸ್ತೂರಿಯವರು ಸೂಚಿಸಿದ ಆಕಾಶವಾಣಿ ಎನ್ನುವ ಹೆಸರು ಎಲ್ಲರಿಗೂ ಸಮ್ಮತಿಯಾಯಿತು. ಅಂದು ಆಕಾಶವಾಣಿ ಎನ್ನುವ ಹೆಸರಿಟ್ಟುಕೊಂಡು ಮೈಸೂರಿನಲ್ಲಿ ಪ್ರಸಾರ ಮಾಡಿದ ಕೇಂದ್ರ ಇಂದು ಭಾರತದಾದ್ಯಂತ ಬೆಳೆದಿದೆ. ಎಲ್ಲಕ್ಕೂ ಆಕಾಶವಾಣಿ ಎನ್ನುವ ಹೆಸರೇ ಬಳಕೆಯಾಗಿದೆ. ಇದೊಂದು ಕಸ್ತೂರಿಯವರ ಹೆಗ್ಗಳಿಕೆ. ಅವರ ಎಲ್ಲಾ ಕೃತಿಗಳು ಅವರ ಲಾಲಿತ್ಯಪೂರ್ಣ ಪ್ರಬಂಧಗಳಿಗೆ ಸಾಕ್ಷಿಯಾಗಿವೆ. ಕೈಲಾಸಂ ಅವರದು ಒಂದು ರೀತಿಯ ಮಾತುಗಾರಿಕೆಯಾದರೆ, ಕಸ್ತೂರಿಯವರದು ಇನ್ನೊಂದು ರೀತಿ. ಕಸ್ತೂರಿಯವರು ರಾಶಿಯವರ ಜೊತೆ ಸೇರಿ ಕೊರವಂಜಿ ಹಾಸ್ಯ ಮಾಸಪತ್ರಿಕೆಯನ್ನು ಇಪ್ಪತ್ತೈದು ವರ್ಷಗಳ ಕಾಲ ಸಮರ್ಥವಾಗಿ ನಡೆಸಿಕೊಂಡು ಬಂದಿದ್ದು ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿ ಹಾಕಿಕೊಟ್ಟಿತು. ಅಣಕುಹಾಡುಗಳು ಕಸ್ತೂರಿಯವರ ಹಾಸ್ಯದ ಇನ್ನೊಂದು ಮಗ್ಗುಲು.

ಕಾಲೇಜಿನಲ್ಲಿ ಅನೇಕ ಅಶು ನಾಟಕಗಳನ್ನು ಬರೆದು ಆಡಿಸಿದರು. ಅಂದರೆ ಬೆಳಗ್ಗೆ ಎಲ್ಲರೂ ಸೇರಿದಾಗ ಸಂಜೆ ನಾವೊಂದು ನಾಟಕ ಆಡೋಣ ಅಂತ ತೀರ್ಮಾನಿಸುವುದು. ಕಸ್ತೂರಿಯವರೇ ನಾಟಕದ ಛಾಪನ್ನು ಮೂಡಿಸುವುದು. ನಂತರ ಎಲ್ಲರೂ ಸೇರಿದಾಗ ನಾಟಕ ಹೀಗಿರುತ್ತೆ ಅಂತ ಬರೀ ಬಾಯಿಮಾತಲ್ಲೇ ಅವರಿಗೆಲ್ಲ ತಿಳಿಸಿ ನಾಟಕ ಆಡಿಸೋದು. ಅವರನ್ನು ಆಗ ತಮಾಷೆಯಾಗಿ ನಾಟಕದ ಕಸ್ತೂರಿ ಎಂದೇ ಕರೆಯುತ್ತಿದ್ದರು.

ಅವರ ಬಹು ಮೆಚ್ಚುಗೆಯ ಕೃತಿ ಪಾತಾಳದಲ್ಲಿ ಪಾಪಚ್ಚಿ. ಅದರಲ್ಲಿ ಪಾಪಚ್ಚಿಯ ಚಮತ್ಕಾರಗಳು ಅನೇಕ. ಅವಳು ಹೇಳುವ ಒಂದು ಪದ್ಯ ಹೀಗಿದೆ.

ಒಂದು ಮೂರು ಚಕ್ಕುಲಿ ಚೂರು

ಐದು ಎರಡು ಊರಿಗೆ ಹೊರಡು

ನಾಲ್ಕು ಎಂಟು ಅಜ್ಜಿಯ ಗಂಟು

ಏಳು ಆರು ಮೆಣಸಿನ ಸಾರು

ಒಂಭತ್ತು ಹತ್ತು ಎಂಜಲೆಲೆ ಎತ್ತು

ಪಾಪಚ್ಚಿ ಇರುವ ಕವನಗಳನ್ನು ತಿರುಚಿ ತಿರುಚಿ ಹೇಳುವುದರಲ್ಲಿ ನಿಷ್ಣಾತಳು. ನಮಗೆಲ್ಲ ಗೊತ್ತಿರುವ ಹಾಗೆ ನಾಯಿ ಇಲಿಯನ್ನು ಕಂಡರೆ ಅಟ್ಟಿಸಿಕೊಂಡು ಹೋಗುತ್ತದೆ. ಕೆಲವು ವೇಳೆ ಅದನ್ನು ನುಂಗಿಬಿಡುತ್ತದೆ. ಅಂಥಾ ಒಂದು ನಾಯಿಯ ಹಾಡು ಹೀಗಿದೆ.

ಟೈಗರೆಂಬ ನಾಯಿ ತನ್ನ

ನೆರೆಯಲಿದ್ದ ಇಲಿಯ ಕರೆದು

ನಿನ್ನ ಮೇಲೆ ತಪ್ಪು ಹೊರಿಸಿ

ಜಡ್ಜಿ ಮುಂದೆ ನಿಲ್ಲಿಸುವೆ

ಬಾರೇ ಬೇಗ ಎಂದಿತು

ಇಲಿಯು ಪಾಪ, ಅತ್ತು ಕರೆದು

ಕೇಸು ಗೀಸು ಜಡ್ಜಿ, ಗಿಡ್ಜಿ
ಬೇಡ ಬಿಡಿರಿ ಎನ್ನಲು
ನಾನೇ ಲಾಯರ್ ನಾನೇ ಜಡ್ಜಿ
ಎಂದು ನಾಯಿ ಬೊಗುಳುತಾ
ಮರಣ ಶಿಕ್ಷೆ ವಿಧಿಸಿತು.

ಒಂದು ಹಾಡಿನ ಅಥವಾ ಪದ್ಯದ ಸಾಲಿಗೆ ಇನ್ನೊಂದು ಮುದ ಕೊಡುವಂಥ ಸಾಲನ್ನು ಸೇರಿಸುವುದರಲ್ಲಿ ಕಸ್ತೂರಿ ಸಿದ್ಧಹಸ್ತರು. ಅಣಕುವಾಡುಗಳ ಕೆಲವು ಝಲಕ್ ನೋಡಬೇಕೆಂದರೆ :

ಕುಮಾರ ಸ್ವಾಮಿಯು ಹಾಡಿದನೆಂದರೆ
ಸಭೆಯಲಿ ಗುಡುಗೇ ಮೊಳಗುವುದು
ಕೋಪವು ಕಣ್ಣಲಿ ಸಿಡಿಯುವುದು, ಬಾಯಲಿ
ಶಾಪದ ಪದ ತುಳುಕಾಡುವುದು

ನಿದ್ದೆಯ ಲೋಕದಿ ಕನಸಿನ ಲೈಬ್ರರಿ
ತಿರುವಿದೆ ನುಂಗಿದೆ ಪುಟಗಳ ಮುರಿದು
ನೀರನು ಕುಡಿದೆ ಬುರುಡೆಯ ಕೆರೆದೆ
ಕಾಗದ ತುಂಬಾ ಗರಗರ ಬರೆದೆ

ಹಾಸ್ಯವನ್ನು ವಿಜೃಂಭಿಸುವುದೇ ಅದರ ಮಾತಿನ ಮತ್ತು ಬರವಣಿಗೆಯ ಮುಖ್ಯ ಉದ್ದೇಶ. ತಮಗೆ ಅನಾರೋಗ್ಯವಾದಾಗ ಡಾಕ್ಟರ ಬಳಿ ಹೋಗಬೇಕಾಗಿ ಬಂದಾಗ ಮಲವನ್ನು ಶೀಷೆಯಲ್ಲಿ ಹಾಕಿಕೊಂಡು ಹೋಗಬೇಕಾದ ಪ್ರಸಂಗವನ್ನು ವಿವರಿಸುತ್ತಾ ಕಸ್ತೂರಿಯವರು ಡಾಕ್ಟರ ಷಾಪಿಗೆ ಹೋಗುವಾಗ ಮಲ ತುಂಬಿದ ಶೀಷೆಯ ಮೇಲೆ ಕಸ್ತೂರಿ ಅಂತ ಬರ್ಕೊಂಡು ಹೋಗಬೇಕಲ್ಲ ಎನ್ನುತ್ತಾರೆ. ದೊಡ್ಡವರೊಂದಿಗೆ ದೊಡ್ಡವರಾಗಿ ಮಕ್ಕಳೊಂದಿಗೆ ಮಕ್ಕಳಾಗಿ ಇದ್ದವರು ಕಸ್ತೂರಿ.

ಕಸ್ತೂರಿಯವರು ರಾಶಿಯವರನ್ನು (ಇವರು ಎಂ ಶಿವರಾಂ – ಪ್ರಖ್ಯಾತ ವೈದ್ಯರು –ಇವರ ಕಾವ್ಯ ನಾಮ ರಾಶಿ) ಆಗಾಗ ಭೇಟಿಯಾಗುತ್ತಿದ್ದಾಗ ಅವರು ತರಿಸುತ್ತಿದ್ದ ಇಂಗ್ಲಿಷಿನ ಪಂಚ್ ಪತ್ರಿಕೆಯನ್ನು ಓದುತ್ತಿದ್ದರು. ಅದರಲ್ಲಿರುತ್ತಿದ್ದ ಹಾಸ್ಯ ಬರಹಗಳು, ವ್ಯಂಗ್ಯಚಿತ್ರಗಳು ಮುಂತಾದುವು ಕಸ್ತೂರಿಯವರನ್ನು ಸೆಳೆಯುತ್ತಿದ್ದವು. ಆಗ ಅವರ ಮನದಲ್ಲಿ ಹುದುಗಿದ್ದೆ ಒಂದು ಆಸೆ, ನಮ್ಮ ಕನ್ನಡದಲ್ಲೂ ಇಂಥಾ ಪತ್ರಿಕೆಯೊಂದು ಇದ್ದರೆ ಎಷ್ಟು ಚೆನ್ನಾಗಿರೋದು ಅಂತ. ಹಾಗೆ ಹುಟ್ಟಿದ್ದೇ ಕನ್ನಡದ ಕೊರವಂಜಿ ಹಾಸ್ಯ ಮಾಸ ಪತ್ರಿಕೆ. ರಾಶಿಯವರ ಜೊತೆ ಸೇರಿ ಇಂಗ್ಲಿಷ್‌ನ ಪಂಚ್ ಮಾದರಿ ಪತ್ರಿಕೆಯಾದ ಕೊರವಂಜಿಯನ್ನು ಇಪ್ಪತ್ತೈದು ವರ್ಷಗಳ ಕಾಲ ಸಮರ್ಥವಾಗಿ ನಡೆಸಿಕೊಂಡು ಬಂದಿದ್ದು ಕನ್ನಡದ ಹಾಸ್ಯ ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿ ಹಾಕಿಕೊಟ್ಟಿತು. ಹಾಸ್ಯವನ್ನು ವಿಜೃಂಭಿಸುವುದೇ ಅದರ ಮುಖ್ಯ ಇದ್ದೇಶ. ಇಂದಿನ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿಯ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್ ಅವರು ತಮ್ಮ ವ್ಯಂಗ್ಯಚಿತ್ರ ರಚನೆ

ಪ್ರಾರಂಭ ಮಾಡಿದ್ದು ಕನ್ನಡದ ಕೊರವಂಜಿಯಿಂದ ಎನ್ನುವುದು ಕನ್ನಡದ ಮಟ್ಟಿಗೆ ಒಂದು ಹೆಗ್ಗಳಿಕೆ. ಅಷ್ಟೇಕೆ, ಕನ್ನಡದ ಪ್ರಮುಖ ಹಾಸ್ಯ ಬರಹಗಾರರಾದ ದಾಶರಥಿ ದೀಕ್ಷಿತ್, ಟಿ. ಸುನಂದಮ್ಮ, ಕೊಳ್ಳೇಗಾಲದ ರಾಮಾನುಜ, ಕೇಫ, ಹಾ.ರಾ. ಮುಂತಾದವರೆಲ್ಲ ಬರಹ ಪ್ರಾರಂಭಿಸಿದ್ದು ಕೊರವಂಜಿಯಿಂದ. ಕಸ್ತೂರಿಯವರು ಕೊರವಂಜಿಯಲ್ಲಿ ಕಸ್ತೂರಿ, ಕಾಮತ್, ಕೇಸರಿ, ಖಾರಾಂತ, ನಾ,ಕಸ್ತೂರಿ, ನಾ.ಕಾ. ರುದ್ರಮ್ಮ, ಶ್ರೀಮತಿ ರುದ್ರಮ್ಮ, ಶ್ರೀಮತಿ ಕೇಸರಿ, ಪಾಟಾಳಿ ಮುಂತಾದ ಅನೇಕ ಹೆಸರುಗಳಿಂದ ಲೇಖನ ಬರೆಯುತ್ತಿದ್ದರು. ಕೊರವಂಜಿ 25 ವರ್ಷಗಳ ಕಾಲ ಕನ್ನಡಿಗರನ್ನು ರಂಜಿಸಿ, ಸುಸ್ತಾಗಿ, ಆರ್ಥಿಕವಾಗಿ ಅವರ ಸಹೋದ್ಯೋಗಿಯೊಬ್ಬರು ಕಸ್ತೂರಿಯವರಿಗೆ ಬಂದ ಪ್ರಮೋಷನ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಕಾಲೇಜಿನಲ್ಲಿ ಎಲ್ಲರೊಂದಿಗೂ ಮಾತಾಡುತ್ತಿದ್ದರಂತೆ, ಆಗ ಕಸ್ತೂರಿಯವರು ಸ್ವಲ್ಪವೂ ಸಿಟ್ಟು ಮಾಡಿಕೊಳ್ಳದೇ ಅವರನ್ನು ತಮ್ಮ ಕೋಣೆಗೆ ಕರೆಸಿ ನೋಡು ಯಾವುದೋ ಒಂದು ಕೆಲಸವನ್ನು ನಾನು ಮಾತ್ರ ಮಾಡೋಕೆ ಸಾಧ್ಯ, ಅದು ನಿನ್ನಿಂದ ಸಾಧ್ಯವಿಲ್ಲ ಅದಕ್ಕೇ ನನ್ನನ್ನು ಪ್ರಿನ್ಸಿಪಾಲ್ ಆಗಿ ಪ್ರಮೋಷನ್ ಮಾಡಿದಾರೆ ಅಂದರು. ಆಗ ಅವರು ಮತ್ತೆ ಛಾಲೆಂಜ್ ಮಾಡಿದಾಗ ಒಂದು ಒಪ್ಪಂದಕ್ಕೆ ಬಂದರು. ಕಾಲೇಜಿನ ಕಾಮನ್ ರೂಮಿಗೆ ಎಲ್ಲರನ್ನೂ ಕರೆಸೋದು. ಅವರೆಲ್ಲರ ಎದುರಿಗೆ ಕಸ್ತೂರಿಯವರು ಒಂದು ಕೆಲಸವನ್ನು ಮಾಡುವುದು. ಅದೇ ಕೆಲಸವನ್ನು ಸಹೋದ್ಯೋಗಿಯೂ ಮಾಡಿದರೆ ಅವರಿಗೆ ಪ್ರಿನ್ಸಿಪಾಲ್ ಹುದ್ದೆಯನ್ನು ಬಿಟ್ಟುಕೊಡುವುದು. ಇಲ್ಲವಾದಲ್ಲಿ ಸಹೋದ್ಯೋಗಿಯು ಎಲ್ಲರಿಗೂ ಮಸಾಲೆ ದೋಸೆ ಕೊಡಿಸಬೇಕು ಎನ್ನುವ ಷರತ್ತು. ಸಹೋದ್ಯೋಗಿಯು ಷರತ್ತಿಗೆ ಒಪ್ಪಿಕೊಂಡರು. ಆಗ ಕಸ್ತೂರಿಯವರು ದೊಡ್ಡದಾಗಿ ಬಾಯಿ ತೆಗೆದು ತಮ್ಮ ಕಟ್ಟಿಸಿದ ಹಲ್ಲು ಸೆಟ್ಟನ್ನು ತೆಗೆದಿಟ್ಟರು. ಸಹೋದ್ಯೋಗಿಯ ಕಡೆ ನೋಡಿ ನೀವೂ ತೆಗೆದಿಡಿ, ನಿಮಗೇ ಪ್ರಿನ್ಸಿಪಾಲ್ ಹುದ್ದೆ ಕೊಡಿಸುತ್ತೇನೆ ಅಂದರು. ಸಹೋದ್ಯೋಗಿ ನಾಚಿಕೆಯಿಂದ ತಲೆ ತಗ್ಗಿಸಿದರು. ಯಾಕೆಂದರೆ ಅವರದು ಕಟ್ಟಿಸಿದ ಹಲ್ಲಲ್ಲ. ಹೀಗೆ ಎಂಥಾ ಸನ್ನಿವೇಶವನ್ನೂ ಸಹಜವಾದ ಹಾಸ್ಯಕ್ಕೆ ತರ್ಜುಮೆ ಮಾಡೋ ತಾಕತ್ತು ಕಸ್ತೂರಿಯವರಿಗಿತ್ತು.

ಇವರ ಸಾಹಿತ್ಯ ಕೃತಿಗಳಲ್ಲಿ ಪ್ರಮುಖವಾದುವು ಎಂದರೆ, ಪಾತಾಳದಲ್ಲಿ ಪಾಪಚ್ಚಿ, ಗಾಳಿಗೋಪುರ, ಶಂಖವಾದ್ಯ, ಚಕ್ರದೃಷ್ಟಿ, ಗೃಹದಾರಣ್ಯಕ, ದಿಲ್ಲೀಶ್ವರ ದಿನಚರಿ, ಚೆಂಗೂಲಿ ಚೆಲುವ, ಸಮಗ್ರ ಹಾಸ್ಯ, ರಂಗನಾಯಕಿ, ಕೆಂಪ ಮೈಸೂರಿಗೆ ಹೋದದ್ದು, ಅಣಕು, ಮಿಣಕು, ನೊಂದ ಜೀವಿ, ಕಾಡಾನೆ, ಗಗ್ಗಯ್ಯನ ಗಡಿಬಿಡಿ, ರಾಮಕೃಷ್ಣಯ್ಯನ ದರ್ಬಾರು, ಬ್ಯಾಂಕ್ ದಿವಾಳಿ, ಚಿತ್ರ ವಿಚಿತ್ರ, ವರ ಪರೀಕ್ಷೆ, ತಾಪತ್ರಯ ತಪ್ಪಿತು, ಹೆಡ್ ಮಾಸ್ಟರನ ಮಗಳು ಮುಂತಾದ ನಾಟಕಗಳು.

ಇವೆಲ್ಲವುಗಳಿಗಿಂತ ಕಳಸವಿಟ್ಟ ಹಾಗೆ ಅವರ ಅನರ್ಥ ಕೋಶ ಕನ್ನಡ ಸಾರಸ್ವತ ಲೋಕಕ್ಕೆ ಒಂದು ಅನನ್ಯ ಕೊಡುಗೆ. ಅದರ ಕೆಲವು ಸ್ಯಾಂಪಲ್ಗಳು ಹೀಗಿವೆ.

| | |
|---|---|
| ಅಕ್ರೂರ | – ರಿಟೈರಾದ ಉನ್ನತಾಧಿಕಾರಿ |
| ಅಧ್ಯಾಪಕ | – ಶಾಲೆಯೆಂಬ ಗೊಂಡಾರಣ್ಯದಲ್ಲಿ ರೋಧನ ಮಾಡುವವ |
| ಅಮ್ಮಾವರ ಗಂಡ | – ತನ್ನ ಪತ್ನಿಯನ್ನೇ ಪ್ರೇಮದಿಂದ ಮುದ್ದಿಸುವ ಪತಿ |
| ಆಫೀಸ್ | – ಮನೆ ತಾಪತ್ರಯಗಳನ್ನು ಮರೆತು ನೌಕರರು ನಿದ್ದೆ |

ಮಾಡುವ ಜಾಗ

| | |
|---|---|
| ಅಡುಗೆ | – ಸಂಪಾದಿಸಿ ತಂದಿದ್ದನ್ನು ಮನೆಯಲ್ಲಿ ಹಾಳುಮಾಡುವ ವಿಧಾನಗಳಲ್ಲೊಂದು |
| ಅಯೋಗ್ಯ | – ನಾವು ಬಯಸುವ ಹುದ್ದೆಗೆ ಪೈಪೋಟಿ ಮಾಡುವವ |
| ಈಜಾನುಬಾಹು | – ಈಜುವುದಕ್ಕೆ ಅನುಕೂಲವಾಗುವಷ್ಟು ಉದ್ದವಾದ ಬಾಹು ಉಳ್ಳವನು |
| ಉತ್ತರಕ್ರಿಯೆ | – ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಕ್ರಿಯೆ |
| ಉಳಿತಾಯ | – ನಮಗೆ ಸಾಲ ಕೊಡಬೇಕಾದವರು ಮಾಡಬೇಕಾದ ಕರ್ತವ್ಯ |
| ಏಕಪತ್ನೀವ್ರತಸ್ಥ | – ಒಂದೇ ದೇವರನ್ನು ಪೂಜಿಸುವವ |
| ಅಗಸ | – ನಮ್ಮ ಬಟ್ಟೆಗಳಿಂದ ಬಂಡೆಯನ್ನು ಒಡೆಯಲೆತ್ನಿಸುವ ಧೀರ. ಅರಿವೆಯನ್ನು ಹರಿವೆ ಎಂದೇ ಹೇಳುವವನು |
| ಅಗ್ನಿಮಿತ್ರ | – ಪೆಟ್ರೋಲ್ |
| ಅಡುಗೆ | – ಸಂಪಾದಿಸಿ ತಂದಿದ್ದನ್ನು ಮನೆಯಲ್ಲಿ ಹಾಳು ಮಾಡುವ ವಿಧಾನಗಳಲ್ಲೊಂದು |
| ಅಮ್ಮಾವ್ರ ಗಂಡ | – ತನ್ನ ಸತಿಯನ್ನೇ ಪ್ರೇಮದಿಂದ ಮುದ್ದಿಸುವ ಪತಿ |
| ಅಯೋಗ್ಯ | – ನಾವು ಬಯಸುವ ಹುದ್ದೆಗೆ ಪೈಪೋಟಿ ಮಾಡುವವ |
| ಆಫೀಸ್ | – ಮನೆ ತಾಪತ್ರಯಗಳನ್ನು ಮರೆತು ನೌಕರರು ನಿದ್ದೆ ಮಾಡುವ ಸ್ಥಳ |

ಇವುಗಳು ಕೇವಲ ಸ್ಯಾಂಪಲ್‌ಗಳಷ್ಟೆ. ಇಂಥಾ ಸಾವಿರಾರು ಅನರ್ಥಗಳ ಮುಖಾಂತರ ಮುದ ಕೊಟ್ಟವರು ಕಸ್ತೂರಿ.

ಅವರ ಹಾಸ್ಯ ಲೇಖನದ ಒಂದು ಮಾದರಿ ಹೀಗಿದೆ.

ಬಾಲವೇ ನಾಸ್ತಿ

ಸುಗ್ರೀವ, ಆಂಜನೇಯ ಮುಂತಾದ ಕಪಿಗಳೆಲ್ಲರೂ ಶ್ರೀರಾಮನೊಂದಿಗೆ ಸೀತಮ್ಮನವರನ್ನು ಬಿಡಿಸಿಕೊಂಡು ಬರುವುದಕ್ಕಾಗಿ ಲಂಕೆಗೆ ಹೊರಟರು. ಸುಗ್ರೀವನ ರಾಣೀವಾಸದವರಿಗೆ ಅವರೆಲ್ಲರೂ ಎಂದು ಹಿಂತಿರುಗಿ ಬರುತ್ತಾರೋ ಎಂಬುದೇ ಚಿಂತೆ. ರಾಮನ ಅನುಗ್ರಹದಿಂದ ಕಪಿಗಳಿಗೆ ಯಾವ ಅಪಾಯವೂ ತಗುಲುವುದಿಲ್ಲವೆಂದು ಅವರಿಗೆ ಗೊತ್ತು. ಅವರಿಗಿದ್ದ ಬಯಕೆ ಬೇರೊಂದು.

ರಾಣೀವಾಸದವರು ಯಾರೂ ಮನುಷ್ಯ ಜಾತಿ ಹೆಂಗಸನ್ನು ನೋಡಿರಲಿಲ್ಲ. ರಾಜಕುಮಾರಿಯನ್ನು ಅವರು ಕಂಡಿದ್ದೆ ಇಲ್ಲ. ಸೀತಾದೇವಿ, ಮಹಾರಾಜನ ಮಗಳು, ಮಹಾರಾಜನ ಸೊಸೆ. ಅವಳ ಅಂದವನ್ನೂ ಚೆಂದವನ್ನೂ ಎಲ್ಲರೂ ಕೊಂಡಾಡುತ್ತಿದ್ದರು. ಲಂಕಾಧೀಶ್ವರನು ಅವಳನ್ನು ಅಪಹರಿಸಿದನು. ಶ್ರೀರಾಮಚಂದ್ರನು ಅವಳನ್ನು ಬಿಡಿಸಿತರಲು ದಂಡು, ಧಾಲಿ ಕಟ್ಟಿಕೊಂಡು ಹೋಗುತ್ತಿದ್ದಾನೆ. ಆದ್ದರಿಂದ ರಾಣಿಯವರಿಗೆ

ಸೀತಾದೇವಿಯನ್ನು ನೋಡಬೇಕೆಂದ ಆಸೆ ಉಂಟಾಯಿತು.

ರಾಕ್ಷಸರನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ತಮ್ಮ ಊರಿಗೆ ಬಂದು ಒಂದು ದಿನ ತಂಗಲೇಬೇಕೆಂದು ಅವರು ಬಲವಂತ ಪಡಿಸಿದರು. ರಾಮನೂ ಕೂಡಾ ಆಗಬಹುದು ಎಂದು ಒಪ್ಪಿದನು.

ಒಂದೆರಡು ತಿಂಗಳಾದ ಕೂಡಲೇ ರಾಣಿವಾಸದವರೆಲ್ಲರೂ ಎತ್ತರವಾದ ಒಂದು ಮರವನ್ನು ಹುಡುಕಿದರು. ಅದರ ತುತ್ತ ತುದಿಯಲ್ಲೇ ಕುಳಿತು ದಿನವೂ ಲಂಕೆಯ ಕಡೆ ಆಕಾಶವನ್ನೇ ನೋಡುವರು. ಹನುಮಂತನ ಹೆಗಲ ಮೇಲೆ ಗಂಡ, ಹೆಂಡತಿ, ಮೈದುನ ಬರುವರು ಎಂದು ಅವರ ನಂಬಿಕೆ. ಆದರೆ ರಾಮನು ಆ ರೀತಿ ಬರಲಿಲ್ಲ. ಕುಬೇರನ ವಿಮಾನದಲ್ಲಿ ಬಂದಿಳಿದನು. ವಿಮಾನದೊಳಗಿಂದ ರಾಮ, ಲಕ್ಷ್ಮಣ, ಸೀತೆ, ವಿಭೀಷಣ, ಕಪಿವೀರರು ಎಲ್ಲರೂ ಹೊರಕ್ಕೆ ಬಂದರು. ಅವರೆಲ್ಲರೂ ಸುಗ್ರೀವನ ಅರಮನೆಯ ಅಂಗಳದ ಕಡೆಗೆ ನಡೆದರು.

ರಾಣೀವಾಸದವರೆಂದರೆ ಹೆಣ್ಣು ಕಪಿಗಳು. ಅವರು ಸೀತೆಯನ್ನು ಬಿಟ್ಟ ಕಣ್ಣು ಬಿಟ್ಟ ಹಾಗೆ ಕೊಂಚ ಹೊತ್ತು ನೋಡಿದರು. ನೋಡಿ, ಕಿಚಿಪಿಚಿ ನಕ್ಕರು. ಅವರ ಮನೆಯೊಳಕ್ಕೆ ಛಂಗನೆ ನೆಗೆದರು. ನೆಲದ ಮೇಲೆ ಬಿದ್ದು ನಕ್ಕರು. ಇವಳೇನೇ ಸೀತೆ? ಸ್ವಲ್ಪವೂ ಚನ್ನಾಗಿಲ್ಲ. ಮುಖ ಮುಂದಕ್ಕೆ ಚಾಚಿರಬೇಡವೇ? ಎಷ್ಟು ಅಗಲ ಅವಳ ಕಣ್ಣು. ಹಣೆಯೂ ತುಂಬಾ ಅಗಲ. ಉದ್ದವಾದ ಜಡೆ ಬೇರೆ. ವಿಪರೀತ ಎತ್ತರ. ಕೈ ಬೇರೆ ಮೋಟು. ಬಾಲವೇ ನಾಸ್ತಿ ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು.

ಇದು ಅವರ ಹಾಸ್ಯ ಲೇಖನದ ಒಂದು ಮಾದರಿ. ಇಂತಹ ನೂರಾರು ಸಾವಿರಾರು ಲೇಖನಗಳನ್ನು ಬರೆದು ಜನಮಾನಸದಲ್ಲಿ ನೆಲೆಸಿದರು.

ಸಾಮಾನ್ಯವಾಗಿ ಇಂದು ನಮಗೆಲ್ಲ ಭಾನುವಾರ ಬಂದರೆ ಏನು ಮಾಡೋದು ಎನ್ನುವ ಯೋಚನೆ ಇರುತ್ತದೆ. ಭಾನುವಾರ ಮಾಡೋಣ ಅಂತ ಅನೇಕ ಕೆಲಸಗಳನ್ನು ಮುಂದುಮುಂದಕ್ಕೆ ಹಾಕಿಕೊಂಡು ಬಂದಿರುತ್ತೇವೆ. ಆದರೆ ಭಾನುವಾರ ಬಂದರೆ ಮಾತ್ರ ಯಾವ ಕೆಲಸ ಮಾಡೋದು ಯಾವ ಕೆಲಸ ಬಿಡೋದು ಎನ್ನುವ ಚಿಂತೆ ಕಾಡಿ ಕೊನೆಗೆ ಯಾವ ಕೆಲಸವನ್ನೂ ಮಾಡದೇ ಎಲ್ಲವನ್ನೂ ಮುಂದಿನ ಭಾನುವಾರಕ್ಕೆ ಮುಂದೂಡಲಾಗುತ್ತದೆ. ಅಂದಿನ ದಿನಗಳಲ್ಲಿಯೂ ಈತರದ ಜಿಜ್ಞಾಸೆ ಮೂಡುತ್ತಿತ್ತಂತೆ. ಅದನ್ನು ಕಸ್ತೂರಿಯವರು ತುಂಬಾ ಚನ್ನಾಗಿ ಒಂದು ಕವನದ ಮೂಲಕ ವಿವರಿಸಿದ್ದಾರೆ. ಅದು ಹೀಗಿದೆ.

**ಸಂಡೇ ಸಂದೇಹ**

ಪೇಪರೋದಲೆ ? ಷೇವು ಮಾಡಲೇ?
ಸುಂನೆ ಕುರ್ಚಿಲಿ ಕೂರಲೇ
ಮಕ್ಕಳಿಬ್ಬರ ಹೋಮುವರ್ಕನು
ಮಾಡಿಕೊಡಲೇ ಈಗಲೇ
ಭಾನುವಾರವು ಹಾಳು ಬಂದರೆ
ಏನು ಮಾಡುವುದೆಂದು ತೋಚದು
ಗಾಣದೆತ್ತನು ಬಿಚ್ಚಿ ಬಿಟ್ಟರೆ

ಮತ್ತೆ ರೌಂಡೇ ಹೊಡೆವುದು

ಮಾವಗೊಂದು ಪತ್ರ ಬರೆಯಲೇ?
ಹಿತ್ತಲನು ಗುಡಿಸಲೇ
ಬಟ್ಟೆ ಒಗೆಯಲೇ? ಎರೆದು ಕೊಳ್ಳಲೇ?
ಮಾರ್ನಿಂಗ್ ಷೋವಿಗೆ ಹೋಗಲೇ?
ಹಳೆಯ ಗೆಳೆಯರಿಗಿತ್ತ ಸಾಲವ
ಕಾಡಿ ಬೇಡಿ ಪಡೆಯಲೇ?

ಹರಿದ ಷರ್ಟನು ಹೊಲಿದು ಮಡಗಲೇ
ರಾಮನಾಮವ ಬರೆಯಲೇ
ಸಣ್ಣ ಕೂಸನು ಆಸುಪತ್ರಿಗೆ
ಸಾಗಿಸೌಷಧ ಕುಡಿಸಲೇ

ಅವಳ ಕೋಪವ ತಣಿಸಿ ಸೀರೆಯ
ಕೊಂಡು ಕಾಲಿಗೆ ಬೀಳಲೇ
ಅಚ್ಚುಕಟ್ಟಾಗೂಟ ಮಾಡಲು
ಆಲೂಗೆಡ್ಡೆಯ ಹೆಚ್ಚಲೇ

ಭೇದಿ ಮಾತ್ರೆಯ ನುಂಗಿ ಹೊಟ್ಟೆಯ
ಕ್ಲೀನು ಮಾಡಲೇ ಮಲಗಲೇ?

ಉಳಿದ ದಿನಗಳು ಏನು ಮಾಡುವು
ದೆಂಬುದೆಲ್ಲವು ಗೊತ್ತಿದೆ
ಭಾನುವಾರವು ಬಂದಿತೆಂದರೆ
ಮೆದುಳಿಗೇನೂ ತೋಚದು.

**ಪ್ರಶ್ನೋತ್ತರ**

ನಮ್ಮ ದೇಶದ ಅತಿ ದೊಡ್ಡ ಕೈಗಾರಿಕೆ ಯಾವುದು –ತಿರುಪೆ
ಅದಕ್ಕಿನ್ನೊಂದು ಹೆಸರು ಹೇಳಿ ನೋಡೋಣ –ಮಾಮೂಲು
ವಿಶ್ವವಿದ್ಯಾನಿಲಯದ ಪದವೀಧರರಿಗೆ ಕರಿ ಅಂಗಿ ಯಾಕೆ
–ವಿದ್ಯಾ ಗಣಪತಿ
'ಕರಿ'ವದನನಲ್ಲವೇ

ಈಗಿನ ಲಾರಿಗಳಿಗೆ ಆರು ಚಕ್ರಗಳು ಯಾಕೆ –
ದಾರಿಹೋಕರೆಲ್ಲರೂ ನಾಲ್ಕು ಚಕ್ರಗಳಿಂದ ತಪ್ಪಿಸಿಕೊಳ್ಳುತ್ತಿರುವುದರಿಂದ

ಹಾಲಿಗೆ ನೀರು ಬೆರೆಸುವುದೇಕೆ –ಹಸುವಿಗೆ ಎಷ್ಟು ನೀರು ಕುಡಿಸಿದರೂ ಪ್ರಯೋಜನವಿಲ್ಲದಿರುವುದರಿಂದ

**ಅಳಿಯ ಮಾವನಿಗೆ ಹೇಳೋ ಮಾತು**

ನಾನ್ಯಾಕೆ ಬಡವನು ನಾನ್ಯಾಕೆ ಪರದೇಶಿ
ಸೋಮಾರಿ ಹೇ ಮಾವ ನೀನಿರುವ ತನಕ

ಪುಟ್ಟಿಸಿದ ತಾಯಿ ತಂದೆ ಎಷ್ಟು ಮಾತ್ರದ ನಂಟು
ಕಷ್ಟದಲಿ ಕೈ ಹಿಡಿದ ಸತಿಯ ತಂದೆ

ಪೆಟ್ಟಿಗೆಯೊಳಗಿನ ಚೆಕ್ಕು ಬುಕ್ಕಿನ ಹಾಳೆ
ನೆಟ್ಟಗೆ ರುಜು ಹಾಕಿ ನೀ ಕೊಡುವ ತನಕ

ಬೂಟ್ಸು ಕೊಟ್ಟವ ನೀನೆ ಪಾಲಿಷ್ ಹಾಕುವವ ನೀನೆ
ಉಡಲು ಹೊದಿಯಲು ಬಟ್ಟೆ ಕೊಡುವವ ನೀನೆ

ಮಡದಿ ಬಾಣಂತನವ ನಡೆಸಿಕೊಡುವವ ನೀನೆ
ಬಿಡದೆ ಸಲಹುವ, ಮಡೆಯ, ನೀನಿರುವ ತನಕ

ವಿದ್ಯೆ ಕಲಿಯಲು ನೀನೆ ದುಡ್ಡು ಬಿಚ್ಚಿದೆ ಸುಮ್ಮನೆ
ಉದ್ಧಾರ ಕರ್ತ ಮಮ ಸ್ವಾಮಿ ನೀನೆ

ಪೆದ್ದನೀ ಹಣವಂತ, ಮಾವ, ನಿನ್ನಡಿ ಮೇಲೆ
ಬಿದ್ದುಕೊಂಡಿರುವ ನನಗೆ ಯಾತರ ಭಯವು

**ಅಂದಿನ ಗಾದೆಗಳು**

ಬೀಗರು ಬೀಗರು ಒಂದು ಅವರನ್ನು ಕೂಡಿಸಿದ ಪುರೋಹಿತರೇ ಒಂದು
ಅಳಿಯನಿಗೆ ಅಧಿಕಾರ ಸಿಕ್ಕರೆ ಅತ್ತೆ ಅಟ್ಟಕ್ಕೆ ಹೋದಳು
ಮದುವೆ ಕಾಲ ಬಂದರೆ ಸರಿ, ಮಾರ್ವಾಡಿ ಮೆರೆದದ್ದೂ ಮೆರೆದದ್ದೇ
ಸಾಲಂಕೃತ ಕನ್ಯಾದಾನ ಮಾಡಿದರೆ ಸಾಲ ಕೊಟ್ಟ ಶೆಟ್ಟಿ ಸುಮ್ಮನಿದ್ದಾನೆಯೇ
ಮದುವೆಗೆ ಬಂದ ಬಡ ಬೀಗಿತ್ತಿಗೆ ಇಜ್ಜೋಡಿ ಮಕ್ಕಳು
ಜಡ್ಜಿ ವರ ಕೊಟ್ಟರೂ ಗುಮಾಸ್ತೆ ಕೊಡಬೇಕಲ್ಲ
ಚೋಟುದ್ದ ಲಾಯರಿಗೆ ಮೋಟುದ್ದ ಗುಮಾಸ್ತೆ
ಕಕ್ಷಿ ಕಣ್ಣೆಲ್ಲಾ ಸಾಕ್ಷಿ ಮೇಲೆ
ಲಾಯರ ಮೇಲೆ ಲಾಯರು ಬಿದ್ದರೆ ಸತ್ಯ ಹೊರ ಬರುತ್ತೇ

ಬೆರಳು ತೋರಿಸಿದರೆ ಉಂಗುರ ಹಾಕಿಬಿಡುತ್ತಾರೆ

**ಪರೀಕ್ಷೆಗೆ ಸಂಬಂಧ ಪಟ್ಟ ಗಾದೆಗಳು**

ಕೊಡುವುದು ಒಂದು ಕ್ವೆಶ್ಚನ್ – ಬಿಡುವುದು ನೂರೆಂಟು ಬುರುಡೆ

ರಾತ್ರಿಯೆಲ್ಲಾ ರಾಮಾಯಣ ಹೇಳಿಕೊಟ್ಟು ಬೆಳಗಾಗೆದ್ದು ರಾಮನಿಗೂ ಸೀತೆಗೂ ಏನು ಸಂಬಂಧ ಅಂತ ಕೇಳುತ್ತಾರೆ

ಇನ್ನಿಲ್ಲಾ ಅಂತ ಬರೆದರೂ ಚೆನ್ನಿಲ್ಲಾ ಅಂತ ಜರೆಯುತ್ತಾರೆ

ಆನ್ಸರ್ ತೋರಿಸಿ ಅವಲಕ್ಷಣ ಅಂತ ಅನಿಸಿಕೊಂಡ ಹಾಗೆ

ಗುರುಗಳು ಕಲಿಸಿದ್ದು ಠಕ್ಕು ಹುಡುಗ ನಂಬಿದ್ದು ಲಕ್ಕು

ದಡ್ಡನ ಹಿಂದಿನ ಸೀಟಿನಲ್ಲಿ ಕೂರಬಾರದು ಪೆಚ್ಚನ ಪಕ್ಕದ ಸೀಟಿನಲ್ಲಿ ಕೂರಬಾರದು

ಕೆಟ್ಟ ಮೇಲೆ ಬುದ್ಧಿ ಬಂತು ಕೊಟ್ಟ ಮೇಲೆ ಉತ್ತರ ಹೊಳೆಯಿತು

ಕಾಪಿ ಮಾಡಕ್ಕೆ ಬರದವನು ಕ್ವೆಶ್ಚನ್ ಪೇಪರ್ ದೂರಿದ

**ಅಣಕ ಹಾಡು**

(ಡಿವಿಜಿ ಯವರ ಕ್ಷಮೆ ಕೋರಿ)

**ಮಾತು**

ಕೋಪ ಸಹಜದ ಧರ್ಮ ರೇಗುವುದು ಪತಿ ಧರ್ಮ

ರೇಗಿ ರೇಗಿಸುತಿಹುದೇ ಪತಿದರ್ಮ

ರೇಗಿ ರೇಗಿಸಿ ಉರಿದು ಸತಿಯ ಗೋಳಾಡಿಸುವ

ವರವ ನಿಮಗಿತ್ತನಲ ದೇವ ಬೊಮ್ಮ

**ಮರು ಮಾತು**

ಅಳುವು ಸಹಜದ ಧರ್ಮ ಅಳುತಿಹುದೇ ಸ್ತ್ರೀ ಧರ್ಮ

ಅತ್ತು ಅಳು ಬರಿಸುವುದೇ ಸತಿಯ ಧರ್ಮ

ಅಳುವ ಅಳಿಸುವ ಅತ್ತು ಪತಿಯ ಗೋಳಾಡಿಸುವ

ಲಲನೆಯರ ಸೃಜಿಸಿದನೇ ಮಂಕು ಬೊಮ್ಮ

ಕಡೆಯದಾಗಿ ಕಸ್ತೂರಿಯವರು ತಮ್ಮಲ್ಲಿದ್ದ ಹಾಸ್ಯಪ್ರಜ್ಞೆಯನ್ನು ಹೀಗೆ ಒಟ್ಟುಗೂಡಿಸುತ್ತಾರೆ. ಹಾಸ್ಯಪ್ರಜ್ಞೆ ಇದ್ದರೆ ಜೀವನದಲ್ಲಿ ಕ್ಷುದ್ರವಾದುದು ಯಾವುದು ಮುಖ್ಯವಾದುದು ಯಾವುದು ಎಂಬ ಸಾರಾಸಾರ ಜ್ಞಾನ, ಮೌಲ್ಯ, ವಿವೇಚನೆ, ಸುಖ–ದು:ಖ ಭಯ–ಕ್ಲೇಷ ಏರಿಳಿತಗಳನ್ನು ಪ್ರಸನ್ನ ಚಿತ್ತದಿಂದ ನೋಡುವ ಸಮತೋಲಿತ ಮನೋಧರ್ಮ ಬೆಳೆಯುತ್ತದೆ. ಅದಮ್ಯವಾದ ಕುತೂಹಲ, ವಿಸ್ಮಯಗಳು ನಮಗೆ ನಾವೇ ತಂದುಕೊಳ್ಳುವ ತಾಪತ್ರಯಗಳ ಬಗ್ಗೆ ಔದಾಸೀನ್ಯ ನನ್ನ ಸ್ವಭಾವದಲ್ಲಿ ಬೆಳೆದು ಬಂದ ಗುಣಗಳು. ■

# ಲಿಪಿ ಕಂಡು ಬೆದರಿದ ಕಪಿ

ಎಂ.ಎಸ್. ನರಸಿಂಹಮೂರ್ತಿ

ಕಾಲೇಜಿನ ಹುಡುಗರು ಬೇರೆ ಅಲ್ಲ, ಕೋತಿಗಳು ಬೇರೆ ಅಲ್ಲ ಅಂತ ಕೆಲವರು ಹೇಳ್ತಾರೆ. ಯಾಕೇಂದ್ರೆ ಮಂಗಬುದ್ಧಿ ಹೆಚ್ಚಾಗಿ ಕಾಡೋದು ಹದಿಹರೆಯದ ವಯಸ್ಸಿನಲ್ಲಿ. ಕಾಲೇಜಲ್ಲಿ ಮೇಷ್ಟ್ರು ಪಾಟ ಮಾಡ್ತಾ ಇರೋವಾಗ ರಾಕೆಟ್ ಬಿಡೋದು, ಚುಕ್ಕೆ ಆಟ ಆಡೋದು, ಮೇಷ್ಟ್ರನ ಗೋಳಾಡಿಸೋದು, ಮೇಷ್ಟ್ರ ಕೆಟ್ಟ ಕಾರ್ಟೂನ್ ಬರೆಯೋದು ಇವೆಲ್ಲ ಮಾಡೋ ಹುಡುಗರನ್ನ ನಾವು ಕಂಡಿದ್ದೇವೆ. ಆದ್ರೆ ಎಂತಹ ತರ್ಲೆ ಆಸಾಮಿಗೂ ನೀರು ಕುಡಿಸುವ ಮೇಧಾವಿ ಮೇಷ್ಟ್ರು ಅಂದ್ರೆ ನಾ.ಕಸ್ತೂರಿಯವರು.

ಮೈಸೂರಿನ ಕಾಲೇಜಿನಲ್ಲಿ ನಾ.ಕಸ್ತೂರಿ ಸರ್ ಪಾಟ ಮಾಡುತ್ತಿದ್ದರು. ಚರಿತ್ರೆಗೆ ಸಂಬಂಧಪಟ್ಟ ಪಾಠಕ್ಕೆ ನೋಟ್ಸ್ ಕೊಡುತ್ತಿದ್ದರು. ಎಲ್ಲರೂ ನೋಟ್ಸನ್ನು ಸರಸರನೆ ಬರೆದುಕೊಳ್ಳುತ್ತಿದ್ದರು. ಆದರೆ ಒಬ್ಬ ಕಪಿ ಮಾತ್ರ ಕೈ ಕಟ್ಟಿಕೊಂಡು ಜಂಬದಿಂದ ಕುಳಿತಿದ್ದ. ತನಗೂ, ಕ್ಲಾಸಿಗೂ ಸಂಬಂಧವಿಲ್ಲವೇನೋ ಎಂಬಂತೆ ಎತ್ತಲೋ ನೋಡುತ್ತಾ ಕುಳಿತಿದ್ದ. ಅವನನ್ನು ಗುರುತಿಸಿದ ಮಾಸ್ತರು ಸ್ಟ್ಯಾಂಡಪ್ ಎಂದು ರೇಗಿದರು.

"ಯಾಕೋ ? ಏನಾಗಿದೆ ಕೈಗೆ ? ಬರ್ಕೋ ನೋಟ್ಸು"

"ಬೇಕಾಗಿಲ್ಲ ಸಾರ್" ರಪ್ಪನೆ ಉತ್ತರ ಬಂತು.

"ಏಯ್, ಪರೀಕ್ಷೆಗೆ ಬರುತ್ತೆ ಕಣೋ, ಬರ್ಕೊಳ್ಳೋ"

"ಬೇಕಾಗಿಲ್ಲ ಸಾರ್, ಮತ್ತೆ ಮತ್ತೆ ಯಾಕೆ ಬರ್ಕೋಬೇಕು ?"

"ಏನ್ಹೇಳ್ತಾ ಇದ್ದೀಯೋ ನೀನು ಕಪಿ ?"

"20 ವರ್ಷದ ಹಿಂದೆ ನಮ್ಮಪ್ಪನಿಗೂ ನೀವು ಮೇಷ್ಟ್ರಾಗಿದ್ರಿ. ಆಗ ನೀವು ಬರೆಸಿರೋ ನೋಟ್ಸು ನೀಟಾಗಿ ಅಪ್ಪ ಇಟ್ಟಿದ್ದಾರೆ. ಅದೇ ನೋಟ್ಸ್‌ನಿಂದಾನೇ ನಮ್ಗೆ ನೀವು ಡಿಕ್ಟೇಷನ್ ಕೊಡ್ತಾ ಇರೋದು, ನಮ್ಮಪ್ಪನ ಹಳೇ ನೋಟ್ಸ್ ನನಗೆ ಸಾಕು ಸಾರ್" ಎಂದ.

ಕಸ್ತೂರಿ ಗಾಬರಿಯಾದರು. ಕ್ಲಾಸಲ್ಲಿ ನಗೆಯ ಅಲೆ ತೇಲಿ ಬಂತು. ಮಾಸ್ತರು ತಯಾರಿ ಮಾಡಿಕೊಂಡು ಬರುವ ನೋಟ್ಸು ಎಷ್ಟು ದಶಕಗಳಾದರೂ ಬದಲಾವಣೆಯಾಗದು ಎಂಬ ಸೂಚ್ಯ ಅರ್ಥ ಅವನ ಮಾತಲ್ಲಿತ್ತು. ಮಾಸ್ತರುಗಳು ವರ್ಷ ವರ್ಷಕ್ಕೆ ಅಪ್‌ಡೇಟ್ ಆಗುವುದು ಬೇಡವೇ ? ಅದೇ ಶಂಖವನ್ನು ಪ್ರತಿ ವರ್ಷ ಊದಿದರೆ ಏನು ಚೆನ್ನ ?

ಇಂಥ ನೋಟ್ಸು, ಭಗವದ್ಗೀತೆಯಂಥ ನೋಟ್ಸು, ಬಂಗಾರದಂತಹ ನೋಟ್ಸನ್ನ ಹುಡುಗರು ಕದ್ದರು. ಅದೂ ಪರೀಕ್ಷೆ ಸಮಯದಲ್ಲಿ ಕಳುವಾಯಿತು. ಅನೇಕ ವರ್ಷಗಳು ಬೆವರು ಸುರಿಸಿ ತಯಾರು ಮಾಡಿದ ನೋಟ್ಸು ಕಳೆದು ಹೋದಾಗ ಎಂಥವರಿಗೂ ದುಃಖವಾಗುತ್ತದೆ. ಸ್ಟಾಫ್ ರೂಮಿನಲ್ಲಿ ನಾ.ಕಸ್ತೂರಿಯವರನ್ನು ಸಹೋದ್ಯೋಗಿಗಳು ತಮಾಷೆ ಮಾಡುತ್ತಿದ್ದರು.

"ನೋಟ್ಸೇ ಹೋದ್ಮೇಲೆ ನಾಳೆಯಿಂದ ಪಾಟ ಇರೊಲ್ಲ. ಕರೆಕ್ಟಾ ಕಸ್ತೂರಿ ?" ಎಂದು ಒಬ್ಬರು ಕೇಳಿದರು. ಆದರೆ ಕಸ್ತೂರಿಯವರಿಗೆ ತಮ್ಮ ಹುಡುಗರ ಬಗ್ಗೆ ಅಭಿಮಾನವಿತ್ತು.

"ನಮ್ಮ ಹುಡುಗರು ನೋಟ್ಸ್ ವಾಪಸ್ ತಂದು ಕೊಟ್ಟೇ ಕೊಡ್ತಾರೆ" ಎಂದರು. ಸ್ಟಾಫ್ ರೂಮಿನಲ್ಲಿದ್ದವರು ಗೊಳ್ ಎಂದು ನಕ್ಕರು.

"ಪರೀಕ್ಷೆ ಸಮಯದಲ್ಲಿ ನೋಟ್ಸ್ ಕದ್ದರೆ ಅದ್ಹೇಗೆ ವಾಪಸ್ ಕೊಡಲು ಸಾಧ್ಯ ? ಎಂದಿಗೂ ವಾಪಸ್ ಬರಲ್ಲ" ಎಂದು ಗೆಳೆಯರು ಹೇಳಿದರು. ಮಾತಿಗೆ ಮಾತು ಬೆಳೆದು ಕಡೆಗೆ ಇದು ಚಾಲೆಂಜಾಯಿತು.

"ನೋಟ್ಸ್ ವಾಪಸ್ ಬಂದರೆ ನೀವೆಲ್ಲರೂ ಮಸಾಲೆದೋಸೆ ಕೊಡಿಸಬೇಕು" ಎಂದು ಕಸ್ತೂರಿ ಹೇಳಿದರು.

"ವಾಪಸ್ ಬರದಿದ್ದರೆ ನೀವು ಟ್ರೀಟ್ ಕೊಡಿಸಬೇಕು" ಎಂದು ಮಾಸ್ತರುಗಳು ಚಾಲೆಂಜ್ ಮಾಡಿದರು.

ಮರುದಿನ ಸ್ಟಾಫ್‌ರೂಮಿನಲ್ಲಿ ಮಾಸ್ತರುಗಳು ಕುಳಿತು ಊಟ ಮಾಡುತ್ತಿದ್ದಾಗ ಕಿಟಕಿಯಿಂದ ರಪ್ ಎಂದು ಎಸೆದ ಪುಸ್ತಕ ಬಂದು ಟೇಬಲ್ ಮೇಲೆ ಬಿತ್ತು. ಯಾರೋ ಪುಸ್ತಕ ಎಸೆದು ಓಡಿ ಹೋಗಿದ್ದರು. ನೋಡಿದರೆ ಅದು ನಾ.ಕಸ್ತೂರಿಯವರ ಕಳುವಾಗಿದ್ದ ನೋಟ್ಸು.

"ನೋಡಿದ್ರಾ, ವಾಪಸ್ ಬಂತು" ಎಂದಾಗ ಎಲ್ಲರಿಗೂ ಗಾಬರಿ.

"ಏನಿದರ ಗುಟ್ಟು ?" ಎಂದು ಅವರು ಕೇಳಿದರು.

"ಇದು ಇಂಗ್ಲಿಷ್ ಮೀಡಿಯಮ್ ಹಿಸ್ಟರಿ ನೋಟ್ಸು. ಆದ್ರೆ ನಾನು ಬರ್ಕೊಳ್ತಾ ಇದ್ದಿದ್ದು ನೋಡಿ ಈ ಲಿಪಿಯಲ್ಲಿ" ಎಂದು ತೆರೆದು ತೋರಿಸಿದರು.

ನೋಡಿದ ಮಾಸ್ತರುಗಳಿಗೆ ಗಾಬರಿಯಾಯಿತು. ಇಂಗ್ಲಿಷ್ ನೋಟ್ಸನ್ನು ನಾ.ಕಸ್ತೂರಿಯವರು ಬರೆದುಕೊಳ್ಳುತ್ತಿದ್ದಿದ್ದು ಮಲೆಯಾಳಂ ಲಿಪಿಯಲ್ಲಿ ! ■

**ಹಿರಿಯ ಹಾಸ್ಯ ಬರಹಗಾರರು**

**ಶ್ರೀ ಎಂ.ಎಸ್. ನರಸಿಂಹಮೂರ್ತಿ ಅವರಿಗೆ ಈ ವರ್ಷದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಅವರಿಗೆ ಅಪರಂಜಿ ಬಳಗದ ಪರವಾಗಿ ಅಭಿನಂದನೆಗಳು**



## ಕೊರವಂಜಿ – ತಿಳಿನಗೆಯಕಾರಂಜಿ

ಎಲ್.ಜಿ. ಜ್ಯೋತೀಶ್ವರ

ಎರಡಾಣೆಗೆ ಎರಡಾನೆಯಗಾತ್ರದ
ಯಾರನೂ ನೋಯಿಸದ
ಹಾಸ್ಯಗುಲಗಂಜಿ
ಹುಟ್ಟಿತು ಮಹಾಯುದ್ಧದ ನೋವಿಗೆ ತಂಪೆರೆಯುವ ಮುಲಾಮಿನಂತೆ
ನಕ್ಕು ನಗಿಸಿ ನಲಿಸುವ ಹಾಸ್ಯಕಂತೆ
ಇದಕ್ಕಿತ್ತು ತಕ್ಕ ಬೊಂತೆ
ನಗೆ ಉಕ್ಕಿಸುವವರ ಹಿಂಡುರಾಶಿ
ನಾ ಕಸ್ತೂರಿಯ ಜೊತೆ ಬೆರೆತು
ತಿಳಿನಗೆಯ ಪರಿಮಳದ ತಂಪು ಕನ್ನಡದ ಹಾಸ್ಯಲಾಸ್ಯದ ಇಂಪು ಹೊತ್ತುದಯಿಸಿತು ನವ್ಯ ನಗೆಕಾಶಿ
ನೀಡಿತು ಇಡೀನಾಡಿಗೆ ಖುಷಿ
ಲಕ್ಷ್ಮಣರೇಖೆ ದಾಟದೆ, ಸೂಜಿ ಮೊನೆಗಿಂತ ಮೊನಚಾದ
ತಿವಿತದಿಂದ ಹೊಡೆದೆಬ್ಬಿಸಿ
ಇಲ್ಲದೇ ಯಾವುದೇ ಭಯ ಕಸಿವಿಸಿ
ಮಾಡಿತು ಪೀಳಿಗೆಗಳ ಪ್ರಜ್ಞಾಕಸಿ
ಇದ್ದಾಳೆ ಕೊರವಂಜಿಯ ಮಗಳು
ನಲವತ್ತರ ಅಪರಂಜಿ
ನಕ್ಕುನಲಿಸುತ
ಅಂಜದೆ ಹಿಗ್ಗಿ ಮುನ್ನಡೆಯುತ
ಮುಂದುವರೆಯಲಿ ಈ
ಅನನ್ಯ ಹಾಸ್ಯರಸಾಯನ
ಆಗಲಿ ದಿವ್ಯ ಅನುಭೂತಿಯ
ನಿತ್ಯಪಾರಾಯಣ !

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ಸರ್, ನಾನು ಯಾವ ಕ್ಷೇತ್ರದಲ್ಲಿ ಪರಿಣಿತಿ ಸಾಧಿಸಬಹುದು ದಯವಿಟ್ಟು ತಿಳಿಸಿ ಎಂದು ಒಬ್ಬ ಜ್ಞಾನಿಯನ್ನು ಕೇಳಿದೆ. ಅದಕ್ಕೆ ಅವರ ಉತ್ತರ: ಒಳ್ಳೇ ಮನುಷ್ಯನಾಗು. ಅದಕ್ಕೆ ಈ ಕ್ಷೇತ್ರದಲ್ಲಿ ಒಳ್ಳೇ ಅವಕಾಶಗಳಿವೆ ಮತ್ತು ಸ್ಪರ್ಧೆ ಕಡಿಮೆ.
- ✓ ಪರಿಸ್ಥಿತಿ ಬದಲಾಗಲಿ ಎಂದು ಬಯಸುತ್ತೇವೆ. ಆದರೆ ನಾವು ಬದಲಾಗಲೆಂದೇ ಪರಿಸ್ಥಿತಿ ಹಾಗೆ ಬದಲಾಯಿತು ಎಂಬುದನ್ನು ಮರೆಯುತ್ತೇವೆ.
- ✓ ಟು ಟ್ರಾಪ್ಸ್ ಯು ನೀಡ್ ಟು ಅವಾಯ್ಡ್: 1. ಕೇರಿಂಗ್ ಅಬೌಟ್ ವಾಟ್ ಅದರ್ಸ್ ಥಿಂಕ್. 2. ಥಿಂಕಿಂಗ್ ದಟ್ ದೆ ಕೇರ್.
- ✓ ನೀವು ಕಾಯುತ್ತಿದ್ದಾಗ ಕಾಲ ನಿಧಾನವಾಗಿ ಸರಿಯುತ್ತದೆ; ತಡವಾದಾಗ ಬೇಗ ಬೇಗ ಸರಿಯುತ್ತದೆ; ದುಃಖವಾಗಿದ್ದಾಗ ಭೀಕರ; ಖುಷಿಯಾಗಿದ್ದಾಗ ಬೇಗ ಬೇಗ ಮುಗಿದೇ ಹೋಗುತ್ತದೆ.
- ✓ ಬಿ ದೇರ್ ಫಾರ್ ಅದರ್ಸ್ ಬಟ್ ನೆವರ್ ಲೀವ್ ಯುವರಸೆಲ್ಫ್ ಬಿಹೈಂಡ್.
- ✓ ರಾಮ ರಾಜ್ಯ ಎಂದರೆ ರಾಮನ ಕಾಲದಲ್ಲಿ ಎಲ್ಲವೂ ನಿಷ್ಪಕ್ಷವಾಗಿತ್ತು ಎಂದೇನಲ್ಲ...ಆದರೆ ಅದರತ್ತ ಪ್ರಯತ್ನ ನಡೆದಿತ್ತು.
- ✓ ನಿಮ್ಮ ತಪ್ಪುಗಳ ಬಗ್ಗೆ ಯಾರಾದರೂ ಆಡಿಕೊಳ್ಳುತ್ತಿದ್ದಾರೆ ಎಂದು ತಿಳಿದು ಬಂದರೆ ತಪ್ಪುಗಳ ಬಗ್ಗೆ ವಿವರ ಕೊಡಲು ಹೋಗದಿರಿ ಬದಲಿಗೆ ನನ್ನ ಇತರ ತಪ್ಪುಗಳ ಬಗ್ಗೆ ಅವರಿಗೆ ಮಾಹಿತಿ ಇಲ್ಲ, ಇಲ್ಲದಿದ್ದಲ್ಲಿ ಅವುಗಳನ್ನೂ ಎತ್ತಿ ತೋರಿಸುತ್ತಿದ್ದರು ಎಂದು ಹೇಳಿ.
- ✓ ವೈ ಗ್ರಿನ್ ಅಂಡ್ ಬೇರ್ ಇಟ್ ವೆನ್ ಯು ಕೆನ್ ಜಿನ್ ಅಂಡ್ ಬೇರ್ ಇಟ್?
- ✓ ಬಾವಿಯಲ್ಲಿ ಮುಳುಗಿದ ಮಕ್ಕಳನ್ನು ರಕ್ಷಿಸಬಹುದು ಆದರೆ ಮೊಬೈಲಿನಲ್ಲಿ ಮುಳುಗಿದ ಮಕ್ಕಳನ್ನು ಎತ್ತಲು ಸಾಧ್ಯವೆ?
- ✓ ನನಗೆ ಪ್ರತಿ ವರ್ಷ ಆರು ತಿಂಗಳ ವೆಕೇಷನ್ ಬೇಕು ಎರಡು ಬಾರಿ.
- ✓ ಡು ಟ್ವಿನ್ಸ್ ರೀಯಲೈಸ್ ದಟ್ ಒನ್ ಆಫ್ ದೆಮ್ ವಾಸ್ ಅನ್‌ಪ್ಲಾನಡ್?
- ✓ ವಿಷದ ಅವಧಿ ಮುಗಿದಿದ್ದರೆ ಅದು ಇನ್ನಷ್ಟು ವಿಷಕಾರಿಯೆ ಅಥವಾ ವಿಷವಲ್ಲವೆ?
- ✓ ಷೇಡ್ ಈಸ್ ದಿ ಸನ್ ಪ್ರೊವೈಡಿಂಗ್ ರಿಲೀಫ್ ಎಗೈನಸ್ಟ್ ಇಟಸೆಲ್ಫ್.
- ✓ ಒಂದು ಮುಗುಳ್ನಗೆ, ಒಂದು ಅಪ್ಪುಗೆ, ಒಂದು ಥ್ಯಾಂಕ್ ಯು, ಒಂದು ಅಭಿನಂದನೆ... ಬದುಕಿನಲ್ಲಿ ಅತಿ ಹೆಚ್ಚು ಪ್ರಭಾವ ಬೀರುವುದು ಈ ಸಣ್ಣ ಸಣ್ಣ ವಿಷಯಗಳು.

■

ಕೊರವಂಜಿ ಸೆಪ್ಟೆಂಬರ್ 1942

# ಗುರು–ಶಿಷ್ಯ ಚಪ್ಪಾಳೆ ಪೈಪೋಟಿ

[ಶಾಲಾ ವಾರ್ಷಿಕೋತ್ಸವದ ದಿನ ಇನ್ಸ್ಪೆಕ್ಟರ್ ಸಾಹೇಬರ ಭಾಷಣ ಕಾಲದಲ್ಲಿ ಚಪ್ಪಾಳೆಗಳ ತೂಗುಯ್ಯಾಲೆ !!]

ಮಹನೀಯರೇ!

ನಾನೂ ನಿಮ್ಮಂತೆಯೇ ಒಬ್ಬ ಉಪಾಧ್ಯಾಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. (ಮೇಷ್ಟರುಗಳ ಚಪ್ಪಾಳೆ) ಆದರೆ ನಾನು ಇನ್ನೂ ನಿಮ್ಮಲ್ಲನೇಕರ ಹಾಗೆ ಹುಡುಗುತನವನ್ನು ಕಳೆದುಕೊಂಡಿಲ್ಲ. (ಹುಡುಗರ ಚಪ್ಪಾಳೆ).



ಹುಡುಗರೆಂದರೆ ಹಲ್ಲುಕೀಳದ ಹಾವುಗಳು (ಮೇಷ್ಟರಚಪ್ಪಾಳೆ) ಎಂಬ ಭಾವನೆ ಶುದ್ಧತಪ್ಪು (ಹುಡುಗರ ಚಪ್ಪಾಳೆ).

ಉಪಾಧ್ಯಾಯನು ಹಾವಾಡಿಗನೂ ಅಲ್ಲ; ಕುರುಬನೂ ಅಲ್ಲ (ಮೇಷ್ಟರ ಚಪ್ಪಾಳೆ) ಅಂದರೆ, ಅವನು ಕೋಲುಗಾರನೂ ಅಲ್ಲ. (ಹುಡುಗರ ಚಪ್ಪಾಳೆ) ದಂಡಂ ದಶಗುಣಂಭವೇತ್ ಎಂಬ ಆರೋಕ್ತಿ (ಮೇಷ್ಟರ ಚಪ್ಪಾಳೆ) ಆಧುನಿಕ ಬಾಲಕರಿಗೆ ಅನ್ವಯಿಸುವುದಿಲ್ಲ. (ಹುಡುಗರ ಚಪ್ಪಾಳೆ)

ಇದ್ದಕ್ಕಿದ್ದ ಹಾಗೆ ಯಾರೂ ಬೃಹಸ್ಪತಿಗಳಾಗುವುದಿಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ. (ಮೇಷ್ಟರ ಚಪ್ಪಾಳೆ).

ಉಪಾಧ್ಯಾಯರೂ ಕೂಡ ಬೃಹಸ್ಪತಿಗಳಾಗಿ ಹುಟ್ಟಲಿಲ್ಲ. (ಹುಡುಗರಚಪ್ಪಾಳೆ).

ಹುಡುಗರೂ ಅಷ್ಟೆ (ಮೇಷ್ಟರಚಪ್ಪಾಳೆ).

ಆದರೆ, ಬೆತ್ತದಿಂದ ಬಡಿದು ಬಡಿದು ಬೃಹಸ್ಪತಿಗಳನ್ನು ತಯಾರು ಮಾಡಲು ಸಾಧ್ಯವಿಲ್ಲ (ಹುಡುಗರಚಪ್ಪಾಳೆ).

ಅಂದ ಮಾತ್ರಕ್ಕೆ ಯಾವ ಉಪಾಧ್ಯಾಯನೂ ಕೂಡ ಸುಮ್ಮನೆ ಕೈಕಟ್ಟಿಕೊಂಡು ಕೂಡಕೂಡದು (ಮೇಷ್ಟರ ಚಪ್ಪಾಳೆ).

ಬೆತ್ತಕ್ಕೆ ಬದಲಾಗಿ ಅವರು ಪ್ರೀತಿಯನ್ನೇ ಬಳಸಬೇಕು (ಹುಡುಗರಚಪ್ಪಾಳೆ) ಪ್ರೀತಿ ಅಂದರೆಭೀತಿ ಮಿಶ್ರವಾದ ಪ್ರೀತಿ ! (ಮೇಷ್ಟರುಗಳ ಚಪ್ಪಾಳೆ)

ಭೀತಿ ಅಂದರೆ, ನೀತಿಯನ್ನರಿತ ಭೀತಿ ! (ಹುಡುಗರ ಚಪ್ಪಾಳೆ)

ವಿದ್ಯಾರ್ಥಿಗಳೂ ಕೂಡ ವಿನೀತರಾಗಿ (ಮೇಷ್ಟರ ಚಪ್ಪಾಳೆ)

ಹೇಡಿತನವನ್ನುತೊರೆದು (ಹುಡುಗರ ಚಪ್ಪಾಳೆ)

ವಿಧೇಯರಾಗಿ (ಮೇಷ್ಟರ ಚಪ್ಪಾಳೆ)

ಕೇವಲ ಪುಸ್ತಕದ ಹುಳಗಳಂತಾಗದೆ (ಹುಡುಗರ ಚಪ್ಪಾಳೆ) ಭಯಭಕ್ತಿಗಳಿಂದ (ಮೇಷ್ಟರ ಚಪ್ಪಾಳೆ) ಸುಖ (ಹುಡುಗರ ಚಪ್ಪಾಳೆ) ದುಃಖ (ಮೇಷ್ಟರ ಚಪ್ಪಾಳೆ) ಗಳೆರಡನ್ನೂ, ಜಯ (ಹುಡುಗರ ಚಪ್ಪಾಳೆ) ಅಪಜಯ (ಮೇಷ್ಟರಚಪ್ಪಾಳೆ) ಗಳೆರಡರಲ್ಲೂ,........ (ಹೀಗೆಯೇ ......ಮುಂದುವರಿಯಿತು).

■




ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.
ಅವುಗಳಲ್ಲಿ ಇದೂ ಒಂದು – ನಿಮಗಾಗಿ.




" ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಅಂತ ಮೇಷ್ಟ್ರು ಕೇಳಿದ್ರು,
ಬಗ್ಗೀತು ಅಂದೆ. ....ಕೋಪ ಬಂತು ಅವರ್ಗೆ......ಅದರಲ್ಲೇನಜ್ಜಾ ತಪ್ಪಿದೆ ?"

## ಗಾಯಕಲ್ಪ

ಚೌಡಯ್ಯನ ಮನೆಮುಂದೆ ಒಂದು ರೈಸ್‌ಮಿಲ್ ಇತ್ತು ಆದರೂ, ಅವನಿಗೆ ಮಾತ್ರಕುಡಿಯಲು ಅಂಬಲಿ ದೊರೆಯದು. ಮಿಲ್ಲಿನವರು ಸುಲಿದೆಸೆದ ಸಿಪ್ಪೆ, ಗಾಳಿಯಲ್ಲಿ ತೂರಿದ ಹೊಟ್ಟು, ಅವನ ಹಜಾರ ಹತ್ತಿ ಹೊಸಲು ದಾಟಿ ಕಿಟಕಿಯೊಳಗೆ ಕದ್ದು, ನೆಲಗೋಡೆಗಳನ್ನೆಲ್ಲ ಮುಚ್ಚಿತು. ಕೋಣೆ ತುಂಬ ಹೊಟ್ಟು, ಹೊಟ್ಟೆಮಾತ್ರ–ಬರಿದು; ಹಗಲೆಲ್ಲ ಶೀನು! ಉಣಲಿಲ್ಲ ಏನೂ; ಹೀಗಾಯಿತು ಅವನ ಬಾಳು.

ಚೌಡಯ್ಯ ನುರಿತ ನಿರುದ್ಯೋಗಿ. ತಬ್ಬಿಬ್ಬಾಗದ ತಬ್ಬಲಿ. ತಮ್ಮಂದಿರು ಬೇರೆ ಅವನತ ಬೇಲಿಯೊಳಗೆ – ನಾಲ್ಕುಮಂದಿ, ಓದು ಸಾಗದೆ, ತುಂಡಾಂಡಿಗಳಾಗಿ ಮೇದು ಪಿಂಡ ಕತ್ತರಿಸುತ್ತಿದಾರೆ. ಚೌಡಯ್ಯನದು ಸೂಪರ್ ಸಹನೆ. ಬಂದದ್ದೆಲ್ಲ ಬರಲಿ, ಬರಲಿಂದ ಗುಡಿಸೇ ಬಿಡುತ್ತೇನೆ, ಎಂಬ ಹಟ ಅವನದು. ಆದರೂ, ಹಟದ ಜೊತೆಗೆ ಯೋಗವೂ ಕೂಡಿಬರಬೇಕಲ್ಲಾ!

ಒಂದು ದಿನ ಹಸಿವಿನ ಹಾವಳಿ ವಿಪರೀತವಾಗಿ ಕಣ್ಣು ಕತ್ತಲೆ ಕಟ್ಟಿದಾಗ, ಚೌಡಯ್ಯನ ಜೀವನರಥವನ್ನು ತಡೆದು ನಿಲ್ಲಿಸಿದ್ದ ಕೈಮರದ ಕೊಂಬು ಕಳಚಿ ಕೆಳಕ್ಕೆ ಬಿತ್ತು.ಮನೆ ಎದುರಿಗಿನ ಮಹಾಲಕ್ಷ್ಮಿಯನ್ನೇ ಮನೆಯೊಳಕ್ಕೆ ಕರೆದು ಕೂರಿಸಿ ಆದರಿಸಲು ಉಪಾಯ ಹೊಳೆಯಿತು. ಸಂದುಗೊಂದುಗಳಲ್ಲೆಲ್ಲ ರಾಶಿರಾಶಿಯಾಗಿ ಬಿದ್ದಿದ್ದ ಭತ್ತದ ಹೊಟ್ಟನ್ನೇ ಸುಟ್ಟು ಬೂದಿ ಮಾಡಿಸುಣ್ಣ, ಬಣ್ಣಬೆರಸಿ ಪೊಟ್ಟಣಕಟ್ಟಿ ಹಲ್ಲುಪುಡಿಯಾಗಿ ಮಾರಿ ಹಣ ಸಂಪಾದಿಸಲುನಿರ್ಧರಿಸಿದ.

ಕನ್ನಡ ಪಂಡಿತರೊಬ್ಬರು ಅದಕ್ಕೆ 'ಶ್ರೀರಾಮೋದಂತ' ಎಂಬ ಹೆಸರನ್ನು ಸೂಚಿಸಿದರು. ಪೊಟ್ಟಣಗಳನ್ನುಹೊತ್ತು ಚೌಡಯ್ಯ ತಮ್ಮಂದಿರ ಸಮೇತ ಐದಾರು ತಿಂಗಳ ಕಾಲಪಟ್ಟಣಗಳಲ್ಲಿ ತಿರುಗಿದ. ಶ್ರೀರಾಮೋದಂತವನ್ನುಪಯೋಗಿಸಿದರೆ ದಂತವಕ್ರ ಮುಂತಾದ ರಾಕ್ಷಸರುಗಳಿಂದ ಉಂಟಾಗುವ ಸೊಟ್ಟಹಲ್ಲೆಲ್ಲ ನೆಟ್ಟಗಾಗುತ್ತವೆ. ಅಡ್ಡಸಾಲಿನ ಹಲ್ಲುಗಳೆಲ್ಲ ಬಿದ್ದುಹೋಗಿ, ಸುಗ್ರೀವರಾಗುತ್ತೀರಿ, ಎಂದೆಲ್ಲ ಬಸ್ಸ್ಟ್ಯಾಂಡುಗಳಲ್ಲಿ ಒದರಿದ. ಭಾಗ್ಯದೇವತೆ ಕೈ ಹಿಡಿಯಲಿಲ್ಲ; ಕೈಕಚ್ಚಿತು.

ಬೆರಳು ತೋರಿಸಿದ ತಪ್ಪಿಗೆ, ತನ್ನ ಹಸ್ತವನ್ನು ತಾನೇ ನುಂಗಬೇಕಾಯಿತು. ಆಕಾಶವೇ ತಲೆಯಮೇಲೆ ಕವಿಯಿತು. ಆದರೂ ಚೌಡಯ್ಯ ಜಪಾನೀಯರ ಹಾಗೆ, ಬಿಳಿಬಾವುಟ ಹಾರಿಸಿ ಸಾಲಗಾರರ ಕಾಲು ಹಿಡಿಯಲಿಲ್ಲ. ಹೊಟ್ಟಿನಿಂದಲೇ ಹೂರ್ಣ ಸಂಪಾದಿಸಬೇಕೆಂಬ ತನ್ನ ನಿರ್ಧಾರವನ್ನು ಸಡಿಲ ಮಾಡಲಿಲ್ಲ. ಹಲ್ಲಿನ ಹೊರಹೊರೆಯು ಬೆಳ್ಳಗಾಗುತ್ತದೆ ಎಂದು ಅವನು ಅದುವರೆಗೂ ಸಾರುತ್ತಿದ್ದ ಬೂದಿಯನ್ನೇ ಅವನು, 'ಮಹಾತ್ಮಾ ಮೆಡಲ್ಪಾಲಿಷ್' ಎಂಬ ಹೆಸರಿನಿಂದ ಡಬ್ಬಿಗಳಲ್ಲಿ ತುಂಬಿ ಮಾರಲುಪಕ್ರಮಿಸಿದ. ಆದರೆ, ಬಿರುದಾವಳಿಗಳನ್ನೆಲ್ಲ ಕಿತ್ತೆಸೆಯುವ ಚಳುವಳಿಯಿಂದ, ಆಪ್ರಯತ್ನವೂ ಕೂಡ, 'ತಥೈವಭಗ್ನಂ, ರುಧಿರಂತಥೈವ.' ಮನೆ ಬೋಗ್ಯಕ್ಕೆಬಿತ್ತು. ಭೋಗ ಮಾತ್ರ ಸೊನ್ನೆ.

ಆನಂತರ, ಅದೇ ಬೂದಿಯನ್ನೇ ವಾಸನೆಕೊಬ್ಬರಿ ಎಣ್ಣೆಯಲ್ಲಿ ಕಲಕಿ 'ಕೇಶಬಂಧು' ಎಂದು ಸಾರಿದ, ಬಂಧುಗಳ ಮೇಲೆ ಸರ್ವೇಸಾಮಾನ್ಯವಾಗಿ ತೋರುವ ತಾತ್ಸಾರವನ್ನೇ ಮಹಾಜನಗಳು ಕೇಶಬಂಧು ವಿಷಯದಲ್ಲೂ ಪ್ರಕಟಿಸಿದರು. ಆಸ್ನೇಹಕ್ಕೆ ಸ್ನೇಹಿತರೇ ಇಲ್ಲವಾಯ್ತು!

ಆಮೇಲೆ, ಅದೇ ಬೂದಿಯನ್ನೇ 'ನವಯೌವನಚೂರ್ಣ'ವೆಂದು ಶೀಷೆಗಳಲ್ಲಿ

ತುಂಬಿ, ಅವುಗಳ ಮೇಲೆ, ಸಳಮಹಾರಾಜನು ಹುಲಿಯನ್ನು ಹೊಯ್ದಚಿತ್ರವನ್ನಂಟಿಸಿ, ವ್ಯಾಪಾರಕ್ಕೆ ತಂದ. ಮನೆಮುಂದಿನ ಹೊಟ್ಟಿನ ರಾಶಿಯಿಂದಾಚೆ ಅವನ ಬುದ್ಧಿ ಓಡಲೊಲ್ಲದು. ಅದಕ್ಕೂ ತನ್ನ ಭವಿಷ್ಯಕ್ಕೂ ದೈವಿಕವಾದ ಗಂಟೊಂದಿದೆ ಎಂಬುದು ಅವನ ನೆಚ್ಚು.ಈ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಸಿ ನೆಕ್ಕಿದರೆ, ಅರವತ್ತಕ್ಕೆ ಅರಳಿ, ಯುವಕನಾಗುತ್ತಾನೆ ಎಂದು ಡಂಗುರ ಹೊಡೆದ. ಯಾಕೊ, ಏನೊ, ನಮ್ಮ ದೇಶದ ಮುದುಕರಿಗೆಲ್ಲ ಬೂದಿಮುಚ್ಚಿದ ಷಂಡರಂತಿರುವುದೇ ಲೇಸೆಂದೆನಿಸಿರಬೇಕು. ಏಕೆಂದರೆ, ಚೌಡಯ್ಯನ ಬೂದಿ ತಿಂದು ಕಿಡಿಹಾರಿಸಿ ಅಗ್ನಿಬಲ ಹೆಚ್ಚಿಸಲು ಒಬ್ಬರೂ ಮುಂಬರಲಿಲ್ಲ.




ಚೌಡಯ್ಯನಿಗೆ ಬಡತನದ ಬೇಗೆ ಜಾಸ್ತಿಯಾಯಿತು. ಅವನ ಹೆಂಡತಿ ಮೈಮೇಲಿನ ಚೂರುಪಾರು ಚಿನ್ನ ಆಬೇಗೆಗೆ ಕರಗಿತು.

ಇಂತಹ ಬಡಪಟ್ಟಿಗೆಲ್ಲ ಮಣ್ಣುಮುಕ್ಕಿ ಮಲಗುವ ಜೆಟ್ಟಿ ಅಲ್ಲ – ಚೌಡಯ್ಯ. ತನ್ನ ಹಿಂದಣ ಸಾಹಸಗಳೆಲ್ಲ ಬೂದಿಯಲ್ಲಿ ಮಾಡಿದ ಹೋಮದಂತಾಗಲು ತನ್ನಪ್ರಚಾರ ಸಾಮರ್ಥ್ಯ ಕುಗ್ಗಿದ್ದೇ ಕಾರಣವೆಂದು ಚೌಡಯ್ಯ ಎಚ್ಚರಗೊಂಡ. ಮನೆಯಲ್ಲೇ ಮಲಗಿಮಂದಲಿಗೆ ಸವೆಸುತ್ತಿದ್ದ ತನ್ನ ಅನುಜಾತರಿಗೆ ತನ್ನ ಬುದ್ಧಿಗೆ ತೋಚಿದ ಹಲವು ಹೊಸ ತಂತ್ರಗಳನ್ನು ಉಪದೇಶ ಮಾಡಿದ.

ಅವುಗಳ ಆಚರಣೆಯಿಂದ ಇಂದು 'ಗಾಯಕಲ್ಪ' ನಾಡಿನ ಮೂಲೆ ಮೂಲೆಯಲ್ಲೂ ತರಾತುರಿಯಿಂದ ಹರಡಹತ್ತಿದೆ. ಚೌಡಯ್ಯನ ಅತುಳವಾದ ಮೆದುಳನ್ನರಿಯ ಬೇಕಾದರೆ, ನಾವು ಹೊಸ ಪ್ರಕಟನಾ ತಂತ್ರವನ್ನು, ಅವನು ಕಾರ್ಯತಃಹೂಡಿದ ರೀತಿಗಳನ್ನು, ಪರಿಶೀಲಿಸಬೇಕಾಗುತ್ತದೆ......

ಮಟಮಟ ಮಧ್ಯಾಹ್ನದಲ್ಲಿ ಯಾವುದಾದರೊಂದು ಬೀದಿಗೆ ನುಗ್ಗಿ, ಅಲ್ಲಿಯ ಮನೆಯೊಂದರ ಬಾಗಿಲನ್ನು ತಟ್ಟುವುದು. ಒಳಗಿಂದಬರುವ, 'ಯಾರು', ಎಂಬ ಪ್ರಶ್ನೆಗೆ, 'ನಾನು', ಎಂಬ ಉತ್ತಮಪುರುಷ ಉತ್ತರವನ್ನು ಕೊಡುವುದು.' ಏನು ಬೇಕಾಯಿತು', ಎಂಬ ಎರಡನೆಯ ಪ್ರಶ್ನೆಗೆ, 'ಸ್ವಾಮಿ' ಅಥವಾ, 'ತಾಯಿ' ಎಂದು ಸಂಬೋಧಿಸಿ, 'ನೋಡಿ! ಗಾಯಕಲ್ಪ ಎಂಬ ಒಂದು ಔಷಧಿಯನ್ನು ಮಾರುವವರು ಈ ಕಡೆಗೆಲ್ಲೂ ಬಂದರಂತೆ. ನಿಮ್ಮ ಮನೆಗೆಲ್ಲಾದರೂ.....' ಎಂಬುವುದರೊಳಗೆ ಅವರು ಮುಖಕ್ಕಡ್ಡಲಾಗಿ ಬಾಗಿಲು ಬಡಿಯುತ್ತಾರೆ. ಅಷ್ಟರಲ್ಲೇ, ಹೊರಗಿಂದ, ಗಟ್ಟಿಯಾಗಿ, ದೀನಸ್ವರದಲ್ಲಿ, "ಬಂದರೆ, ಕೊಂಚ ಆಚೆ ಬೀದಿಗೆ ಬರಹೇಳೀ, ಅವರನ್ನ.... ನಮ್ಮ ಮನೆಯಲ್ಲಿ ಸಣ್ಣ ಕೂಸೊಂದಕ್ಕೆ

ವಿಪರೀತ ಕಜ್ಜಿ...... ಅದು ಬಹಳ ಒಳ್ಳೇ ಮುಲಾಮಂತೆ, ಎಲ್ಲರೂ ಹೇಳುತ್ತಾರೆ" ಎಂದು ಹೇಳುವುದು ಇದೊಂದು ರೀತಿ.

ಬೆಂಗಳೂರು ಮುಂತಾದ ಊರುಗಳಲ್ಲಿ, ಪೇಟೆಂಟ್ ಔಷಧಿಗಳನ್ನು ಮಾರುವ ಅಂಗಡಿ ಸಾಲಿಗೆ ಗಿರಾಕಿಕಿಕ್ಕಿರಿದಿರುವ ಸಮಯ ಕಾದು, ತಮ್ಮಂದಿರಲ್ಲೊಬ್ಬರನ್ನು ನೂಕುವುದು. ಆತ ಅವಸರ ಅವಸರವಾ ಒಂದೆಡೆನುಗಿ 'ಗಾಯಕಲ್ಪ ಒಂದು ಡಬ್ಬ ಕೊಡಿ' ಎಂದು ಹೇಳಿ ನೋಟು ಚಾಚುವುದು. ಅವರು, "ಏನು? ಯಾವುದು?" ಎನ್ನುವಾಗ, "ಕೊಡಿ, ಸ್ವಾಮಿ। ಬ್ಲಾಕ್ಮಾರ್ಕೆಟ್ರೇಟಾದರೂ ಪರವಾಗಿಲ್ಲ..... ವಿಪರೀತಕ ಜ್ಜಿ..... ಬಾಣಂತಿಗೆ" ಎಂದು ಅಂಗಲಾಚುವುದು. 'ನಮ್ಮಲ್ಲಿಲ್ಲ. ಸ್ವಾಮಿ' ಎಂದು ಅವರು ಬೇರೆ ಕಡೆ ತಿರುಗಿದಾಗ, ಗಿರಾಕಿಗಳನ್ನು ನೋಡಿ, "ಏನು ಮಾಡುವುದು, ದೇವರೇ! ತೊನ್ನು, ಇಸಬು, ಕಜ್ಜಿ ಇವಕ್ಕೆಲ್ಲ ಅದನ್ನು ಬಿಟ್ಟರಿಲ್ಲ, ಅಂತಾರೆ. ಡಾಕ್ಟರು! ಇಲ್ಲವಲ್ಲಾ ಇವರಲ್ಲಿ?" ಎಂದು ಹೇಳಿ, ತಲೆಯ ಮೇಲೆ ಕೈಇಟ್ಟು ಮೆಟ್ಟಲಿಳಿಯುವುದು..... ಹಾಗೆಯೇ, ಆಸ್ಪತ್ರೆಗಳಿಗೆ ಹೋಗಿ, ಅಲ್ಲಿಯ ಹೊರ ಚಿಕಿತ್ಸಾಲಯದ ಹಜಾರದ ಬೆಂಚಿನ ಮೇಲೆ ತಮ್ಮ ಸರದಿಗಾಗಿ ಕಾದಿರುವ ಬಡಪಾಯಿಗಳ ನಡುವೆಕುಳಿತು, ಗಾಯಕಲ್ಪದ ಮಾತೆತ್ತಿ ಮಾಯಾ–ಜಾಲವನ್ನು ಬೀರುವುದು....

ಪಬ್ಲಿಕ್ ಲೈಬ್ರರಿ ಶಾಲಾ ಕಾಲೇಜುಗಳ ಲೈಬ್ರರಿ ಮುಂತಾದ ಕಡೆಗಳಿಂದ ಪುಸ್ತಕ ತಂದು, ಓದುವಾಗಿನ ತೂಕಡಿಕೆಯಲ್ಲಿ ಮರೆತು ಒಳಗಿರಿಸಿದಂತೆ, ಅದರೊಳಕ್ಕೆ ಹಲವು ಪತ್ರಗಳನ್ನಿಟ್ಟು ಹಿಂದಕ್ಕೆ ರವಾನಿಸುವುದು. ಪತ್ರಗಳು ಸಾಮಾನ್ಯವಾಗಿ ಈ ಬಗೆಯವು: 'ತೀರ್ಥಪ್ರಸಾದ ರೂಪೇ ಇತ್ಯಾದಿ ಪ್ರಾರಂಭಿಸಿ 'ಇಲ್ಲಿ ಕ್ಷೇಮ. ಅಲ್ಲಿ ಕ್ಷೇಮ ಸಮಾಚಾರ'ಗಳಿಗೆ ಎಂದು ಮುಂದುವರಿಸಿ, 'ಶಾಮುನಿಗೆ ಇನ್ನೂ ಕಜ್ಜಿ, ಸದಾ ಉಜ್ಜುತ್ತಲೇ ಇದಾನೆ, ಎಂದು ಕೇಳಿ ಯೋಚನೆಯಾಗಿದೆ. ಇಲ್ಲಿ ಅಂಗಡಿಗಳಲ್ಲಿ ಗಾಯಕಲ್ಪ ಎಂಬ ಒಂದು ಔಷಧಿಯನ್ನು ಮಾರುತ್ತಿದ್ದಾರೆ. ಹಿತ್ತಲಗಿಡದ ಮದ್ದಲ್ಲ; ಯಾವುದೋ ಸಂಜೀವಿನೀ ಬೆಟ್ಟದ್ದಂತೆ! ಗೋಪಕ್ಕನ ಮನೆ ಮಕ್ಕಳನ್ನು ನೀವು ಇಲ್ಲಿ ಬಂದಿದ್ದಾಗ ಎತ್ತಿಕೊಳ್ಳುವುದಕ್ಕೆ ಅಸಹ್ಯಪಡಲಿಲ್ಲವೆ? ಈಗ ಬಂದು ನೋಡಿ! ಹೇಗಿವೆ! ಕೈ ತೊಳೆದು ಮುಟ್ಟಬೇಕು, ಒಂದೊಂದನ್ನೂ! ಅಲ್ಲೂ ಸಿಗಬಹುದು. ಸಿಗದಿದ್ದರೆ ಬರೆಯಿರಿ! ನಾಗತ್ತೆ ಸಂಗಡ ಕಳುಹಿಸಿ ಕೊಡುತ್ತೇವೆ' ಎಂದು ಕೊನೆಗಾಣಿಸಿ ರುಜುಹಾಕುವುದು. ಈ ಕಾಗದಗಳನ್ನು ಕಂಡೋದುವ ಇತರರ ಮನೆಗಳಲ್ಲಾಗಲಿ ಅವರ ನೆರೆಹೊರೆಯಲ್ಲಾಗಲಿ ಚರ್ಮವ್ಯಾಧಿ ಇಲ್ಲದೆ ಇರುವುದಿಲ್ಲ, ಈ 'ಯುದ್ಧಾ ನಂತರ ಯುಗ' ಇರುವತನಕ! ಆದ್ದರಿಂದ, ಅವರ ಕಣ್ಣಿಗೆ ಆಮೂಲಕ ಗಾಯಕತ್ವವನ್ನುಎರಚಿದ್ದಾಗಿದೆ.

ಚೌಡಯ್ಯನವರ ತಮ್ಮಂದಿರು ಸಿಟಿಬಸ್ಸು, ಲೈನ್ಬಸ್ಸು, ರೆಯಿಲು ಮುಂತಾದ ಸಾರ್ವಜನಿಕ ವಾಹನಗಳಲ್ಲೂ ಅವನ ಬೋಧನೆಯಂತೆ ಪ್ರಚಾರಾಸ್ತ್ರವನ್ನು ಹೂಡಿದರು. ಎಕ್ಸಿಮ ಎಂಬ ಸರ್ವವ್ಯಾಪಿ ರೋಗದಕಳೆ ಅಥವಾ ಕುರುಹು ತೋರಿಸುವ ಅಕ್ಕಪಕ್ಕದವರನ್ನು ಅವರು, 'ಕ್ಷಮಿಸಿ' ಎಂದು ಕರೆದು, "ತಾವಿನ್ನೇನೂ ತಿಳಿದುಕೊಳ್ಳಬೇಡಿ.. ತಮ್ಮ ಪರಿಚಯ ನನಗಿಲ್ಲ. ಆದರೂ, ಇಕೊ, ಇಂಥದ್ದಲ್ಲ, ಇದರ ಅಪ್ಪನಂಥ ಎಕ್ಸಿಮ ಬಂದಿತ್ತು. ನನಗೆ, ಈ ಕೆನ್ನೆಯ ಮೇಲೆ. ಈಗ ಅಲ್ಲಿ ಅದರ ಗುರುತೇ ಇಲ್ಲದೆ ಮಂಗಮಾಯವಾಗಿದೆ. ಹೇಗೆ ಅಂತೀರೋ? ಇಕೊ! ಹೀಗೇನೆ ನಾನೂನೂ ನಿಮ್ಮ ಹಾಗೆ ಕೆನ್ನೆ ಬಿಟ್ಟುಕೊಂಡು ಕೂತಿದ್ದೆ – ಒಂದು ಬಸ್ಸಿನಲ್ಲಿ. ಪುಣ್ಯಾತ್ಮರು ಯಾರೋ ದೇವರು ಬಂದ ಹಾಗೆ ಬಂದು ಹತ್ತಿದರು. ಗಾಯಕಲ್ಪ ಎಂಬ ಔಷಧಿ ಹೆಸರು ಹೇಳಿದರು. ಮೂರೇ ಮೂರು ದಿವಸ...."

ಎಂದು ಅವರ ಕಿವಿಗೆ ಬೂದಿ ತುಂಬುವುದು.

ಪತ್ರಿಕೆಗಳಿಗೂ ಚೌಡಯ್ಯ ಜಾಹಿರಾತುಗಳನ್ನು ಕೊಡುತ್ತಿದ್ದ. ಆದರೆ, ಅವನ ಚಮತ್ಕಾರ ಚಾತುರ್ಯಗಳನ್ನು ನಾವು ಇಲ್ಲೂ ಕಾಣಬಹುದು. "ಮೊನ್ನೆ ಸಂಜೆ ಬಳೇಪೇಟೆ ಬಸ್ಸ್ಯಾಂಡಿನಿಂದ ಕೆಳಕಂಡ ವಿಳಾಸದವರಿಗೆ ಒಂದು ಚಿನ್ನದ ಉಂಗುರ ಲಭಿಸಿದೆ. ಅದನ್ನು ಅಲ್ಲಿ ಕಳೆದುಕೊಂಡವರು ತೃಪ್ತಿಕರವಾದ ರುಜುವಾತು ಕೊಟ್ಟು ಸದರಿಯನ್ನು ಪಡೆಯಬಹುದು...... ಸುಪ್ರಸಿದ್ಧ ಗಾಯಕಲ್ಪ ಮುಲಾಮು ತಯಾರಕರು....." ಎಂದು ಬರೆದು ಕಳುಹಿಸಿದರೆ, ಮ್ಯಾನೇಜರು ಉಚಿತವಾಗಿಯೇ ಅಚ್ಚುಹಾಕುತ್ತಾರೆ. ಎಂತಹ ಸಮಾಜಸೇವಕ, ಅಪರಿಗ್ರಹವ್ರತನಿರತ, ಎಂದು ಕೊಂಡಾಡುತ್ತಾರೆ. ಮರುದಿನ ಮನೆ ಬಾಗಿಲಿಗೆ ಬಂದು ಉಂಗುರ ಕೇಳುವ ನೂರಾರು ಗೃಹಸ್ಥರಿಗೂ, ಗೃಹಿಣಿಯರಿಗೂ, "ಆಗಲೇ ಒಬ್ಬರು ರುಜುವಾತು ಕೊಟ್ಟು ತೆಗೆದುಕೊಂಡು ಹೋದರು" ಎಂದು ಹೇಳಿ, "ಬನ್ನಿ! ಹೇಗಿದ್ದರೂ ಇಷ್ಟು ದೂರ ನಮ್ಮ ಮನೆಗೆ ಬಂದಿರಿ. ಗಾಯಕಲ್ಪದ ಮಹಿಮೆಯನ್ನು ತಿಳಿದುಕೊಂಡು ಹೋಗಿ!" ಎಂದು ಚೌಡಯ್ಯ ಉಪಚರಿಸುವನು.' ಈ ಮನೆ ಬಾಡಿಗೆಗಿದೆ' ಎಂದು ಮನೆಗೋಡೆಯ ಮೇಲೆ ಕೀಲೆಣ್ಣೆಯಿಂದ ಬರೆದದ್ದರಿಂದ, ಅವನ ಹೊಸಲಿಗೆ ಸಾವಿರಾರು ಮಂದಿ ಬಂದು ಗಾಯಕಲ್ಪದ ಸ್ತೋತ್ರವನ್ನು ಕೇಳಿ ಹಿಂತಿರುಗಿದರು.

ಕೆಲವು ಬಾರಿ, ಹಣ ಖರ್ಚುಮಾಡಿ ಜಾಹಿರಾತುಗಳನ್ನು ಪ್ರಕಟಿಸುವುದೂ ಉಂಟು. ಇಲ್ಲದಿದ್ದರೆ, ಚೌಡಯ್ಯ ಹೇಳುವ ಹಾಗೆ, "ಪತ್ರಿಕೆಗಳು ಬದುಕಬೇಡವೆ?" ಆದರೆ, ಅವನ ಪ್ರಚಾರ ಸಾಹಿತ್ಯ ನವನವೀನವಾಗಿರುತ್ತದೆ; "ಗಾಯಕಲ್ಪ ಎಂಬ ದಿವ್ಯಔಷಧಿ ಹಲವಾರು ಪತ್ರಿಕೆಗಳಲ್ಲಿ ಪ್ರಚಾರ ಮಾಡುವಾಗ, ಅಲ್ಲಲ್ಲಿ ಕಾಯಕಲ್ಪ ಎಂಬ ಅಚ್ಚಿನ ತಪ್ಪು ಬಿದ್ದಿರುವುದನ್ನು ವಾಚಕರು ಗಮನಿಸಿ ತದ್ರೀತ್ಯಾ ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ".... "ಹಿಂದುಸ್ತಾನದ ನಾನಾನಗರಗಳಲ್ಲಿ 'ಗಾಯಕಲ್ಪದ' ಇಮಿಟೇಷನ್ಮುಲಾಮುಗಳನ್ನು ತಯಾರಿಸಿ ಮಾರುತ್ತಿರುವರೆಂಬುದು ನಮ್ಮ ಗಮನಕ್ಕೆ ಬಂದಿದೆ. ಕೂಡಲೇ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ನಾವು ನಮ್ಮ ಕಲ್ಪನಾವಿಲಾಸಿಗಳಿಗೆ ಭರವಸೆ ಕೊಡುತ್ತೇವೆ".... "ಗಾಯಕಲ್ಪವನ್ನು ಆದ್ಯಂತ ತರುಮೂಲಗಳಿಂದಲೇ ಸಿದ್ಧಪಡಿಸಿರುವೆ–ವಾದ್ದರಿಂದ, ಅದನ್ನು ಮಾಂಸಾಹಾರಿಗಳು ಉಪಯೋಗಿಸಬಹುದೆ, ಎಂಬ ಪ್ರಶ್ನೆ ಎದ್ದಿದೆ. ಆದರೆ, ಮಾಂಸವೂ ಕೂಡ ಪ್ರಥಮತಃ ತರುಮೂಲವೇ!" "ಭಾರತದ ಅನೇಕ ಭಾಗಗಳಲ್ಲಿ ನಡೆಯುತ್ತಿರುವ ಸೋದರರವಧೆಯಿಂದ, ಅಲ್ಲಿನವರ ಶುಶ್ರೂಷೆಗಾಗಿ ನಾವು ಟನ್ನಟ್ಟಲೆ ಗಾಯಕಲ್ಪವನ್ನು ಸಿದ್ಧಪಡಿಸುತ್ತಿದ್ದೇವೆ ಆದರೂ, ನೀವು ನಿಮ್ಮ ಊರಿನ ಅಂಗಡಿಯಲ್ಲಿ ಕೊಂಡುಕೊಳ್ಳುವ ಡಬ್ಬಿಯಲ್ಲಿ ಹಿಂದಿನ ಪದಾರ್ಥಗಳೇ ಈಗಲೂ ಇವೆ ಎಂದು ಭರವಸೆ ಈಯುವೆವು"

***********

ಚೌಡಯ್ಯ ಈಗ ಶ್ರೀಮಂತ ಜಾತಿಗೆ ಸೇರಿ ಬೀದಿ ಬೀದಿಗಳಲ್ಲಿ ಜೀಪುತ್ತ ಹೋಗುತ್ತಿದ್ದಾನೆ. ಅವನ ತಮ್ಮಂದಿರೆಲ್ಲ ಕ್ರಾಪುಬಾಚಿ ಮುಖಕ್ಕೆ ಪವುಡರ್ಹಚ್ಚಿ, ರಿಸ್ಟ್ವಾಚ್ಸಹಿತವಾಗಿ ಹಿಂದೊಬ್ಬರನ್ನು ಕೂರಿಸಿಕೊಂಡು ಮೋಟಾರ್ಸೈಕಲ್ಲುಗಳಲ್ಲಿ ಬಿರುಬಿರನೆ ತಿರುಗುತ್ತಿದಾರೆ. ಅವರು ತೊಟ್ಟಿರುವ ಚಿನ್ನದ ಸರಗಳು, ಕರ್ರಗಿರುವ ಅವರ ಕತ್ತಿನ ಸುತ್ತ ತೆರದ ಕಂಠದ ತಿಳಿ ರೇಷ್ಮೆ ಷರ್ಟೊಗಳಗಿಂದ ಮಿನುಗುತ್ತಿವೆ.

■

**ಕೊರವಂಜಿ ಜೂಲೈ 1944**

## "ತಾರೆ" ಗಳ ಮರುಮಾತು

('ರಾಘವ'ನ ಹಕ್ಕಿಹಾಡೊಂದನ್ನು ಕುಕ್ಕಿ)
ತಾರೆಗಳೆ ! ಚಿತ್ತರದಸಾಲಿನಲಿ ಮೆರೆವಹೆಣ್ಣುಗಳೆ !
ನೀವು ಕಂಡಿಹುದೇನು ನಿಮ್ಮ ಬದುಕಿನಲಿ?
ಸಾರಿ ಸುರುಳುವುವು ಫಿಲ್ಮುಗಳು ಎನಿತೆನಿತೊ ನಿಮ್ಮ ನೆರಳಿಂದೆ !

***

ಕಂಡುದನು ಹೇಳುವೆವು, ಕಲ್ಪನೆಯ ಕಥೆಯಲ್ಲವೆಮ್ಮ ಕಥೆಯು !
ಮೇಲೆ ರಂಭೆಯರಂತೆ ಶೃಂಗಾರ, ಬೇಟ
ಸೊಗದಮೊಗ್ಗಿನ ಎಳಸು ; ಒಳಗೆಹೊಲಸು !
ಎಲ್ಲೆಲ್ಲು ಸುಳ್ಳಾಟ ಬರಿಯ ಕಪಟ
ಬಲು ಕೀಳುತನ, ಕಪಟ
ನಮ್ಮ ಈ ಆಟ --
ಕಂಡಿಹೆವು ಇದನೆಲ್ಲ ನಮ್ಮ ಬದುಕಿನಲಿ.

***

ಹಾಳು ದಿಗ್ದರ್ಶದಲಿ ಶೂನ್ಯ ನಿರ್ದೇಶದಲಿ ತೊಳಲಿ ನೀವು
ಏನನಾಲೋಚಿಸುತ ಕಾಲ ಕಳೆಯುವಿರಿ?
ಭೀರುತ್ವದಲ್ಲಿ ಮುಳುಗಿ ರೇಗಾಡದೆಯೆ ನೀವು ಏನ ಮಾಡುವಿರಿ?

***

ನಿಮಗೆ ರುಚಿಸುವುದೆಲ್ಲ, ಇವರು ನಡೆಸುವುದೆಲ್ಲ, ಯೋಚಿಸುತ್ತಿಹೆವು ಸಾಲುಪೀಡೆಗಳಂತೆ ಒಂದಾಗುತೊಂದು
ಚಕ್ರಾತಿವಕ್ರಗಳು ಇಲ್ಲಿ ಕುಣಿಯುತ್ತಿವೆ --
ಜಗಳವಾವರಿಸಿಹುದು ಸ್ಟೂಡಿಯದ ತುಂಬ !
ಹಾಸ್ಯ ರಾಕ್ಷಸಗಂಜಿ
ಓಡಿಹಳು ಶಾಂತಿ,
ಕಲೆಯ ಕಾಂತಿ !
ನನ್ನ ಬಳಿ ಸಾರುವಳೆ ? ಎಂದು ಯೋಚಿಸಿತಿಹೆವು.

***

ಕ್ಷಣಕೊಮ್ಮೆ ಏಕಿಂತು ಕಿರಿಚಿ ಕಣ್ಮರೆಯಾಗಿ ಮತ್ತೆ ತೊದಲಿ

ಅಶ್ಲೀಲದಾಳದಲಿ ಬಿದ್ದು ಮುಳುಗುವಿರಿ ?
ಮನವನಾವರಿಸಿರುವೀಮಂಕಾವುದು ? ತಿಳಿಗಣ್ಣ ಬಿಡಲು ಭಯವಾವುದು?

***

ಕಲೆಯ ಮುಂದಿನ ಬಾಳು ಎಂತೊ ಏನೋ ಎಂದು ನಡುಗುತಿಹೆವು.
ಹಣದ, ಹೆಸರಿನ, ಹುಟ್ಟು – ಸಿನಿಮ ಕಸಬಿನ ಗುಟ್ಟು ;
ಅದರ ಗಣಿಯನು ತೋಡೆ ನಾವು ಹಟ ತೊಟ್ಟು
ಹೆಣಗುತ್ತಿರುವೆವು; ನಮ್ಮ ಬಳೆ ಸದ್ದಿಗೇ
ಹಾರುತಿರುವಿರಿ ನೀವು ––
ನಿಮಗಿಲ್ಲ ಗಟ್ಸು !
ಗೆರೆಮೀರಿ ಬರುತಿಹಿರಿ,
ಋಣಮಾಡಿ ತೆರುತಿಹಿರಿ !
ಸರಿಯಾದುದಲ್ಲವಿದು !
ನಿಮ್ಮ ಕುಡಿದಾಟಕ್ಕೆ ನಮ್ಮ ಕುಣಿದಾಟ !
ನಮ್ಮ ನೆಗೆದಾಟಕ್ಕೆ ನಿಮ್ಮ ನಗೆಯಾಟ !
ನಿಮ್ಮ ಬುದ್ಧಿಯ ಮಟ್ಟ
ನಮ್ಮ ಸಿದ್ಧಿಯ ಮಟ್ಟ !
ಎಂದು ಬರುವುದೊ ಏನೊ ನಿಮಗೆ ಭ್ರಮೆಯ ಭಂಗ ?
ಎಂದು ಬಿಡುವಿರೊ ಏನೋ ಕಿಲುಬಿದೊಲವಿನ ಸಂಗ ?
ಎಂಬ ಶಂಕೆಗೆ ಸಿಲುಕಿ ತಿಳಿಗಣ್ಣಬಿಡುತಿಹೆವು !
ಸಾಕು ! ನೋಟಕ !ನಿನಗೆ ಸಾವಿರ ನಮಸ್ಕಾರ !

■



**ಕೊರವಂಜಿ ಜೂನ್ 1957**

## ನನ್ನ ಕುರ್ಚಿ

ಎಂತೆಂಥಾವರು ಬಂದಾಗಲೂ ಕುರ್ಚಿಕೊಟ್ಟು ಕೂಡಿಸುವ ನಾನು, ಬಂಗಾಳಿಗಳು ಬಂದರೆ ಬಿಟ್ಟೇನೆಯೇ? ಬಂಗಾಳಿ ಅಂತ ಆತನೇ ಹೇಳಿಕೊಂಡರೂ ಕೂಡ, ನನಗೆ ಮೊದಮೊದಲು ಕೊಂಚ ಅನುಮಾನ. ಕಡೆಗೆ ಬರಗಾಲದ ದೆಸೆಯಿಂದ ಆತನೂ ನಮ್ಮೂರಿನವರ ಹಾಗಾಗಿರಬಹುದು, ಎಂದುಕೊಂಡೆ. ಮೈಸೂರಿನವರ ಗೆಳೆತನದಿಂದ ನನ್ನ ಮಾತಿನ ಠೀವಿ ಕೂಡ ಬದಲಾಯಿಸಿದೆ, ಅಂತ ಆತನೇ ಹೇಳಿದಾಗ ನನ್ನ ಸಂದೇಹವೆಲ್ಲ ಪರಿಹಾರವಾಯಿತು. ನನ್ನ ಕುರ್ಚಿಯನ್ನ ಆತನ ಹತ್ತಿರಕ್ಕೆ ಎಳೆದುಕೊಂಡೆ.

ಬಂಗಾಳದ ದುಃಸ್ಥಿತಿ, ಆತ ತನ್ನ ಮಕ್ಕಳುಮರಿಗಳನ್ನೇ ಮಾರಿ ಮೂರು ತಿಂಗಳು ಕೂಳೊದಗಿಸಿಕೊಂಡಿದ್ದು, ಎಲ್ಲವನ್ನೂ ವಿವರಿಸಿದ. ವಿವರಿಸುತ್ತ ವಿವರಿಸುತ್ತ, ನನಗೆ ಯಾಕೊ, ಆತ ಶುದ್ಧ ಮೋಸಗಾರ, ಠಕ್ಕ, ವೇಷಾಢಭೂತಿ ಎಂದು ಹೊಳೆಯಿತು. ಅಂದರೆ, ಅಷ್ಟು ಬೇಗನೆ ಹೊಳೆಯಲಿಲ್ಲ, ನಿಧಾನವಾಗಿ ಹರಿಯಿತು.


ಯುದ್ಧದ ದೆಸೆಯಿಂದ ನನ್ನ ಸಂಬಳವೂ ಕೂಡ ಕಾಲು ಭಾಗಕ್ಕಿಳಿದಿದೆ, ಬರಗಾಲ ಬಂದು ನನ್ನ ಬಾಗಿಲನ್ನೂ ಬಡಿದಿದೆ, ಎಂದು ಹೇಳಿ, ಹೆಗಲ ಮೇಲೆ ಟವಲು ಹಾಕಿಕೊಂಡೆ. ಆತ ಎದ್ದು ಮಾತನಾಡಿದ. ನಾನು ಕೈಗೆ ಕತ್ತಿ ತೆಗೆದುಕೊಂಡೆ. ಆತ ಒಂದು ಹೆಜ್ಜೆ ಹಿಂದಕ್ಕೆ ಹಾಕಿದ.

ಹೊರಗೆ ಹೊರಡುತ್ತಲೂ ನಾನು ನನ್ನ ಹಳೇ ಬ್ರಷ್ ತೆಗೆದು, ಒಡಕು ಕನ್ನಡಿ ಮುಂದೆ ಕ್ಷೌರಕ್ಕೆ ಕುಳಿತೆ...

ಏಳೆಂಟು ದಿನಗಳ ಅನಂತರ, ನನ್ನ ರೂಮಿನೊಳಕ್ಕೆ ಒಬ್ಬ ಬರ್ಮಿ ಸಾಹುಕಾರ ಬಂದ. ಸರಿ, ಅದೇ ಕುರ್ಚಿಯನ್ನ ಅವನ ಕೆಳಗಿಟ್ಟು, ಇಂಗ್ಲೀಷ್ ಬರುತ್ತೋ ಅಂತ ಕನ್ನಡದಲ್ಲಿ ಕೇಳಿದೆ. "ಹೂಂ" ಅಂತ ತಲೆ ಅಲ್ಲಾಡಿಸಿದ. ಪುಡಿಕಾಸು ಕೈಯಲ್ಲಿಲ್ಲದಿದ್ದರೂ, ಕೊಡಗೈ ಎಂಬ ಕೀರ್ತಿಯಾದರೂ ನನಗಿರುವುದಕ್ಕಾಗಿ ನಾನು ಹಿಗ್ಗಿದೆ. ನನ್ನ ಮನೆಗೆ ನುಗ್ಗಿ ಹೋಗಬೇಕೆಂದು ಪಬ್ಲಿಕ್ ಪ್ರಾಸಿಕ್ಯೂಟರ್‌ವರೇ ಆತನಿಗೆ ಸೂಚನೆ ಕೊಟ್ಟರಂತೆ. ಸ್ನೇಹ ಅಂದರೆ ಹೀಗಿರಬೇಕಯ್ಯ, ಎಂದು ನಾನು ಆತನಿಗೂ ಹೇಳಿದೆ.

ಸರಿ! ಅವನ ಗೋಳ್ಗತೆ ಪ್ರಾರಂಭವಾಯಿತು. ಆತನ ನಾಲಿಗೆ ನುಲಿದದ್ದು ಸುಮಾರು ನಮ್ಮದರ ಹಾಗೇನೆ. 'ಮಿಂಗ್ ಯಾಂಗ್ ಕ್ಯೂಂಗ್' ಎಂಬ ಮಾರ್ಜಾಲ ಶಬ್ದವೇ ಇಲ್ಲದೆ, ಆತ ತನ್ನ ಊರು, ಕೇರಿ, ಕುಲ, ಗೋತ್ರ ಎಲ್ಲವನ್ನೂ ಒಪ್ಪಿಸಿದ ಆತನ ತಂದೆ ಹೆಸರು 'ಉ ಸಾ ಬಾ' ಆಗಿರಲಿಲ್ಲ; ತಾಯಿಯ ಹೆಸರು 'ಣೀಟಿನ್ ಲೀ' ಆಗಿರಲಿಲ್ಲ. 'ಸಂಶಯಾತ್ಮಾ ವಿನಶ್ಯತಿ,' ಸರಿ ! ಆದರೂ, ಹಾಳು ವಿನಶ್ಯತಿ ದಾರಿಯನ್ನೇ ನನ್ನ ಆತ್ಮ ಹಿಡಿಯಿತು. ಬರ್ಮಾದಿಂದ ಇಂಡಿಯಾ ದೇಶಕ್ಕೆ ಬರುವಾಗ ದಾರಿಯಲ್ಲಿ ಆತನಿಗೆ ಸಿಕ್ಕಿದ ಊರುಗಳ ಹೆಸರನ್ನು ಆತ ಹೇಳಿದ. ಅವು ನನಗೂ ಈಚಿನ ಬಾತ್ಮಿಗಳ ಮೂಲಕ ಪರಿಚಿತವಾಗಿತ್ತು. "ತಧಿಮ್" ಎಂಬ ಒಂದು ಊರನ್ನು ಸೇರಿದಾಗ..." ಎಂದು ಆತ ಹೇಳುತ್ತಲೂ, ನಾನು ಎದ್ದೆ. ಭುಜಕ್ಕೆ ಟವಲು ತಗುಲಿಸಿದೆ. ಚಪ್ಪಲಿಗಳೊಳಕ್ಕೆ ಪಾದಗಳನ್ನು ತುರುಕಿ ಆತ ಪರಾರಿದ.

ಪಾದಗಳನ್ನು ನೋಡುತ್ತೇನೆ...... ಸಾಕ್ಷಾತ್ ಕನ್ನಡನಾಡಿನದು,




ಮೊನ್ನೆ ಒಬ್ಬರು ಮಹನೀಯರು, ಮತ್ತೆ ಅದೇ ಕುರ್ಚಿಯ ಖುಷಿಗಾಗಿ ನನ್ನ ರೂಮಿನೊಳಕ್ಕೆ ಚಿತ್ತೈಸಿದರು. ಅಂತು ಈ ಕುಚೇಲನನ್ನ ಕುಬೇರ ಅಂತ ತಿಳಿದು ಮೋಸ ಹೋಗಿ, ನನ್ನ ಮಕ್ಕಳ ಹೊಟ್ಟೆ ಮೇಲೆ ಹೊಡೆಯುವ ಆಸೆಯಿಂದ, ಈ ಪ್ರಭೃತಿಗಳು ಎಲ್ಲಿಂದೆಲ್ಲ ಬರುತ್ತಾರೆ ? ಅಂತೀನಿ.

ಮೊನ್ನೆ ಬಂದವನು ಬೊಂಬಾಯಿ ಅಪೋಲೊ ಬಂದರಿನಲ್ಲಿದ್ದನಂತೆ. ಯಾಕಿದ್ದ? ನಾನು ಹೇಳಿದ್ದೇನೇ? ನನ್ನ ಕೇಳಿದ್ದನೇ? ಆಸ್ಫೋಟನದ ಸಮಯದಲ್ಲಿ ಅವನ ಕಾರು ಮೇಲೆದ್ದು ಪಕ್ಕಕ್ಕೆ ನುಗ್ಗಿ ಒಂದು ಮನೆ ಗೋಡೆ ಒಡೆದು ಒಳಗೆ ಪ್ರವೇಶಮಾಡಿತಂತೆ. ಆಸ್ಪತ್ರೆಯಲ್ಲಿ ಹದಿನೈದು ದಿನವಿದ್ದು, ಕಳೆದುಕೊಂಡ ಜ್ಞಾನವನ್ನು ಮತ್ತೆ ಸಂಪಾದಿಸಿ ಇತ್ತ ಕಡೆ ಬಂದನಂತೆ. ಕೋಟ್ಯಾಧೀಶ್ವರನಾ–ಗಿದ್ದವನ ಕೈಲಿ ಈಗ ಒಂದು ಕಾಗದದ ಚೂರೂ ಇಲ್ಲವಂತೆ... ಇತ್ಯಾದಿ ಇತ್ಯಾದಿ.

ಕತೆ ಬೆಳೆಯುತ್ತ ಬೆಳೆಯುತ್ತ ನನಗೆ ಆ ಧ್ವನಿಯನ್ನು ಹಿಂದೆ ಎಲ್ಲೋ ಕೇಳಿರುವಂತೆ ಭಾಸವಾಯಿತು ಆತನ ಪಾದದ್ವಯವನ್ನು ನೋಡಿದೆ. ತಥಿಮ್ ಮೂಲಕ ಬ್ರಹ್ಮದೇಶದಿಂದ ಬಂದ ಪಾದಗಳೇ ! ಬಂಗಾಳದ ಬರಗಾಲದಿಂದ ಬಳಲಿದ ಪಾದಗಳೇ ! ಸುಳ್ಳು ಜೀವನದ ಮುಳ್ಳು ಹಾದಿಯನ್ನು ತುಳಿದು ಕಲ್ಲಾದ ಅದೇ ಕಾಲುಗಳು !........

ಛೇ । ಒಬ್ಬ ಮನುಷ್ಯ, ನೋಡಿದರೆ ಒಳ್ಳೆ ಸ್ಫುರದ್ರೂಪಿ, ಎಸ್ಸೆಸ್ಸೆಲ್‌ಸಿ ಆದರೂ ದಾಟಿರುವ ಕನ್ನಡಿಗ, ಹೀಗೆ ಮೂರು ಸಲ ನನ್ನ ಮನೆಗೆ ನುಗ್ಗಿ ಮೂರು ಪುರಾಣ ನೇಯ್ದು, ಇಷ್ಟು ಸ್ವಾರಸ್ಯವಾಗಿ, ಅಭಿನಯಪೂರಿತವಾಗಿ ಗೋಳು ಹೇಳಬೇಕಾದರೆ, ಆತನು ಬಡತನದಿಂದ ನಿಜವಾಗಿಯೂ ಬಂಗಾಲಾಗಿರಬೇಕು, ಎಂದು ನಿಶ್ಚಯಿಸಿದೆ.

ನನಗೆ ಆತನ ಮೇಲೆ ಇದ್ದ ಕೋಪ ಉಡುಗಿತು. ಒಳಗೆ ಹೋಗಿ, ಎರಡು ರೂಪಾಯಿ ತೆಗೆದು ತಂದು, ಅವನ ಕೈಲಿಟ್ಟೆ. ಕನ್ನಡದಲ್ಲೇ "ತಮ್ಮ ಬಡತನ ದೊಡ್ಡದು; ನಾನು ಅದನ್ನು ಪರಿಹರಿಸುವಷ್ಟು ಶಕ್ತನಲ್ಲ ! ಆದರೂ, ತಿಂಗಳಿಗೊಮ್ಮೆ ಹೀಗೆ ಬನ್ನಿ, ಏನಾದರೂ ಕೊಡುತ್ತೇನೆ. ನೀವು ಸನ್ನಿವೇಶಕ್ಕೆ ತಕ್ಕಹಾಗೆ ಕಥೆ ಚೆನ್ನಾಗಿ ಕಟ್ಟುತ್ತೀರಿ. ಇನ್ನು ಮೇಲೆ ಕನ್ನಡದಲ್ಲೇ ಹೇಳಿ... ಸಾಧ್ಯವಾದ ಮಟ್ಟಿಗೆ ನಾನೂ ಕತೆಗಾರ...ಆ ವಿಶ್ವಾಸಕ್ಕೆ ಇಕೊ" ಎಂದು ಹೇಳಿದೆ .......

■

**ಕೊರವಂಜಿ 1942, ಫೆಬ್ರವರಿ**

## ಹುರಿಗಾಳು

"ಅಕ್ಕನಿಗೆ ಹಾರ್ಮೋನಿಯಂ ತಂದುಕೊಟ್ಟ ದಿನದಿಂದ ನಿನಗೆ ಸೈಕಲ್ಲೊಂಡು ಕೊಡಬೇಕು ಅಂತ ಒಂದೇ ಸಮನೆ ರಂಪಮಾಡುತ್ತಿದ್ದೀಯಲ್ಲಾ, ನಿನಗೆಯಾಕೋ ಬೈಸಿಕಲ್ಲು ? " ಅಂತ ತಂದೆ ಕೇಳಿದರೆ, ತೀನು, "ಅಕ್ಕ ಹಾರೋನಿಯಂ ಹಿಡಿದು ಕೂತ ತಕ್ಷಣ ಎಲ್ಲಿಗಾದರೂ ದೂರ ಹೋಗುವುದಕ್ಕೆ!" ಅಂತ ಹೇಳಿಬಿಡೋದೆ?

ಅಲ್ಲಿ, ಈ ಊರಿನಲ್ಲಿರುವ ಎಲ್ಲಾ ಆಸ್ಪತ್ರೆಗಳನ್ನೂ ಒಂದು ಸುತ್ತು ಸುತ್ತಾಯಿತು ಅಂತ ಹೇಳಿದಿರಲ್ಲಾ... ಹೆಂಗಸರಾಸ್ಪತ್ರೆ?"




ಅಂತ ಡಾಕ್ಟರು ಕೇಳಿದರೆ, ಅಲ್ಲೇ ಸಾರ್ನಾನು ಹುಟ್ಟಿದ್ದು" ಅಂತ ಆತ ಉತ್ತರ ಕೊಟ್ಟನಂತೆ !

ಸೌದೆ ಅಂಗಡಿಗೆ ಬೆಂಕಿ ಬಿತ್ತು. ಅದೇ ಬೀದಿ ಸುಬ್ಬಾಜೋಯಿಸರೂ ಅವರ ಮಗನೂ ನೀರು ಸೇದಲು ನಿಧಾನವಾಗಿ, ಹಗ್ಗ ಹುಡುಕಿದರು."ಬೇಗ ಬನ್ನಿ! ಬೇಗ ಬನ್ನಿ!" ಅಂತ ಯಾರೋ ಕೂಗಿಕೊಂಡರು. ಆಗ ಜೋಯಿಸರು, "ಚಿಂತೆಯಿಲ್ಲ, ಚಿಂತೆಯಿಲ್ಲ, ಮೊನ್ನೆ ತಾನೇ ನಾನು ಆ ಅಂಗಡಿಯಿಂದ ಸೌದೆ ತಂದೆ, ನನಗೆ ಗೊತ್ತುಅದರ ಗುಣ" ಅಂದರು!

'ಐ.ಪಿ. ಮಿಕ್ಸ್ಚರ್' ಅಂತ ಬರೆದಿದೆಯಲ್ಲಾ! ಅದು ಯಾವುದು ಸಾರ್ ?" ಎಂದು ಕಾಂಪೌಂಡರನ್ನ ಯಾರೋ ಕೇಳಿದರು, ಸರ್ಕಾರಿ ಆಸ್ಪತ್ರೆಲಿ. ಅವಕ್ಕೆ, ಅವರು, 'ಇಲ್ಲೆಜಿಬಲ್ಲ್ ಸ್ಕಿಫ್ಷನ್ಮಿಕ್ಸ್ ಚರ್' (Illegible Prescription Mixture) ಅಂತೇವೆ ಅದನ್ನ; ಡಾಕ್ಟರುಗಳು ಬರೆದು ಕೊಡುವ ಚೀಟಿ ಅರ್ಥವಾಗದೆ ಇದ್ದರೆ, ಅದನ್ನ ಹುಯ್ದು ಕೊಡುತ್ತೇವೆ. ಅದೇ ಇಲ್ಲಿ ಖರ್ಚುಜಾಸ್ತಿ, ಎಲ್ಲಾ ಔಷಧಿಗಳಿಗಿಂತಲೂ ಅದು ಫಲಕೊಡುತ್ತದೆ" ಎಂದರು.

ಮೊನ್ನೆ, ಯಾವುದೋ ಹಾಸ್ಯಮಯ ಸಿನಿಮಾದಲ್ಲಿ ನನ್ನ ಮುಂದುಗಡೆ ಕುಳಿತಿದ್ದ ಬೆನ್ನಿನ ಮಾಲೀಕನಿಗೆ, "ಸ್ವಾಮಿ ಕೊಂಚ ಅತ್ತಲಾಗೆ ಜರುಗಿ ! ನನಗೇನೂ ಕಾಣುತ್ತಿಲ್ಲ" ಅಂದೆ. ಅವರು, "ಸುಮ್ಮನಿರಿ, ಸ್ವಾಮಿ ! ನನ್ನ ಬೆನ್ನನ್ನೇ ನೋಡುತ್ತಿರಿ ,ನಾನು ನಕ್ಕಾಗ, ನೀವೂ ನಗಿರಿ ಎಂದರು.

"ನೋಡಿ ಡಾಕ್ಟರೇ, ಈ ಖಾಯಿಲೆಗಾಗಿ ನಾನು ಆಗಲೇ ಸಾವಿರ ರೂಪಾಯಿತನಕ ಖರ್ಚುಮಾಡಿದೇನೆ" ಎಂದು ರಾಗ ಎಳೆದು ಹೊಸ ಡಾಕ್ಟರಿಗೂ ಹಳೇ ಡಾಕ್ಟರಿಗೂ ಪೈಪೋಟಿ ತಂದು ಹಾಕಿ ತನ್ನ ಆರೋಗ್ಯವನ್ನು ಸಂಪಾದಿಸಿಕೊಳ್ಳೋಣ ಅಂತ ರೋಗಿ ಹೇಳಿದರೆ, ಡಾಕ್ಟರು "ಅಯ್ಯೋ ಅಯ್ಯೋ! ಆಗಲೇ ನೀವು ನನ್ನ ಹತ್ತಿರ ಬರಬಾರದಾಗಿತ್ತೇ?" ಎಂದು ಮರುಗಿದರಂತೆ.

ಹಾಸ್ಟೆಲ್ವಾರ್ಡನ್ನರು ಅಡಿಗೆಯವನನ್ನು ಕರೆಸಿ "ಏನ್ರಿ ಇದು, ಹುಡುಗರೆಲ್ಲರೂ ನಿನ್ನ ಅಡಿಗೆ ಶುದ್ದ ಹೊಲಸು ಅಂತ ಕೂಗಾಡುತ್ತಾ ಇದಾರೆ, ನಿಮ್ಮನ್ನ ಮನೆಗೆ ಕಳುಹಿಸಿಬಿಡುತ್ತೇನೆ, ಹುಷಾರ್" ಅಂತ ಹೆದರಿಸಿದರು. ಆಗ ಅಡಿಗೆಯವನು, "ಅಯ್ಯೋ ಅಯ್ಯೋ, ಅವರ ಮಾತು ನಂಬಬೇಡಿ ಸಾರ್ನೀವು, ತಾವು ಪಾಠ ಹೇಳೋದು ಶುದ್ದ ಹೊಲಸು ಅಂತ ದಿನವೂ ಊಟದ ಹೊತ್ತಿನಲ್ಲಿಯ ದ್ವಾತದ್ವಾಬೈಯುತ್ತಾರೆ ಅದನ್ನ ನಂಬಿ ತಮ್ಮನ್ನ ಮನೆಗೆ ಕಳುಹಿಸುವುದು ನ್ಯಾಯವೇ ?" ಅಂತ ಕೇಳಿದ!

"ಬುದ್ದಿ !.... ನಿಮ್ಮನ್ನ ದೊಡ್ಡ ಸಾಹೇಬರು ಕರೆಯುತ್ತಾರೆ."

"ನನ್ನನ್ನೇ ಬರಹೇಳಿದರೇನೋ ? ಇಂಥಾವರು ಅಂತ ಹೆಸರು ಹೇಳಲಿಲ್ಲವೇನೋ?"

'ಹೆಸರು ಹೇಳಿಲ್ಲ, 'ಮೂರು ಹೊತ್ತೂ ಗೊರಕೆ ಹೊಡೆಯುತ್ತಾರಲ್ಲಾ, ಆಸೋಮಾರೀನ ಕರೆದುಕೊಂಡು ಬಾ', ಅಂದರು ಬುದ್ದಿ."

■



**ಸುತ್ತಿಗೆ ಇಲ್ಲದಿದ್ರೆ ಬೇಡ ಆ ಪುಳ್ಳಂಗಾಯಿ ಉಂಡೆ ಕೊಡೇ...**

**ಕೊರವಂಜಿ ಆಗಸ್ಟ್ 1952**

## ಶಿವನ ನಗು




ಬೊಗುಳಿ ಉಗುಳುವವರೆಲ್ಲ ಫ್ಲೂ ಪೀಡಿತರೇ,
ಎಲ್ಲಲೀ ವಾಪ್ಲಿಕೇಷನೂ ಖಾಯಿಲೆಯದೆ ?
ಮೂಗ್ಹಿಡಿದು ನೆಗಡಿಯಲಿ ಮುಳುಗಿ ಮೊಸಮೊಸ
ಎಂದು ಮಡದಿ ಮಕ್ಕಳನೆಲ್ಲ ಬೈದು ಬಡಿದು
ರೋಗ, ಫ್ಲೂ, ನನಗೆಂದು ಸುಳ್ಳು ಪತ್ರವ ಬರೆಯೆ
ನೀತಿ ತಪ್ಪಿದವನೆಂದು ನಗುವ ಶಿವನು ॥
ಮೆಣಸು ಶುಂಠಿಯ ಕುಡಿದು, ಯೂಕಲಿಪ್ಟಸ ಬಳಿದು
ಮನೆ ಎಲ್ಲ ಸಾಂಬ್ರಾಣಿ ಹೊಗೆಯ ತುಂಬಿ
ಕೆಟ್ಟ ಕೆಮ್ಮನು ಕಲಿತು ಹೆದರಿ ಮೈ ಬೆವರುವಾ
ನಿತ್ಯರೋಗದ ಮೃಗಕೆ ನಗುವ ಶಿವನು ॥
ದಾರಿಗರ ಬೀದಿಗರ ಉದರದಲಿ ವಾಸಿಸುವ
ಹುಳಗಳನು ಉಸಿರಾಡಿ ಒಳಕೆ ಎಳೆದು
ತನ್ನನರದಲಿ ಬೆಳೆಸಿಲಾಲಿ ಹಾಡಿ
ಅಯ್ಯೋ ಅಪ್ಪಾ ಎನಲು,....ನಗುವ ಶಿವನು ॥
ಅಗೊಬಂತು, ಇಗೊಬಂತು, ಈಊರು, ಈಕೇರಿ
ನಮ್ಮ ಬೀದಿಗು ಬಂತು, ಮನೆಗೆ ಬಂತು
ಹೆದರಿ ಹೇಡಿಗಳಂತೆ ಹಾಸಿಗೆಲಿ ಕಾಲುಚಾಚಿ
ಫ್ಲೂ ಎನಗೆ ! ಫ್ಲೂ ! ಎನಲು, ನಗುವ ಶಿವನು ॥
ಕೋಟಿ ಪೆನ್ಸಿಲಿ ನನಗೆ ಕೊಡಿ ಎನಗೆ, ಡಾಕ್ಟರೆ !
ಸೊಂಟ ನೆಟ್ಟಗೆ ಇಲ್ಲ, ಹೊಟ್ಟೆ ಕಿಚ್ಚು,
ತಲೆ ಭಾರಕಣ್ಣೇನೆ ತಾಳಲಾರೆನು ಎನುವ
ವೇಷಧಾರಿಗಳ ಕಂಡು, ನಗುವ ಶಿವನು ॥
ಇನ್ಫ್ಲುಯೆನ್ಸಾ ಎಂಬ ರಾಜವ್ಯಾಧಿಗೆ ಜನತೆ
ಫ್ಲೂ ಎಂಬ ಕಿರುನಾಮ ಹಣೆಗೆ ಬಳಿಯೆ
ಅಪರಾಧವೆಸಗಿ ನಾವಪಮಾನಗೊಳಿಸಲದು
ಬಡಿದು ಬೀಳಿಸೆ ಜನರ....ನಗುವ ಶಿವನು ॥

■

## ಹೇಗಾದರೂ ಸರಿ


ಕೆಲ ದಿನಗಳಿಂದ ನನಗೆ ಪರಿಚಿತನಾಗಿದ್ದ ಹುಡುಗನನ್ನು ಮೊನ್ನೆ ನಾನು ಹತ್ತಿರಕರೆದುಅಯ್ಯಾ ಈ ಕಾರ್ಡನ್ನು ಕೊಂಚ ಈ ಮೂಲೆ ಕಂಬದಲ್ಲಿರುವ ಟಪಾಲ್ ಡಬ್ಬದೊಳಗೆ ಹಾಕಿ ಬರುತ್ತೀಯಾ ಅಂದು ಕೇಳಿದೆ ಬಲಗಾಲ ಮಂಡಿ ಉಳುಕಿತ್ತು. ಆದ್ದರಿಂದಲೇ ಅವನ ಎದುರು ಹಲ್ಲುಕಿರಿಯುವ ಶೋಚನೀಯ ಪರಿಸ್ಥಿತಿ ಒದಗಿದ್ದು. ಏಕೋ ಏನೋ ಹುಡುಗ ಸುಮ್ಮನಿದ್ದ. ಏಕೋ ಏನೋ ಅವನಿಗೆ ಪರೋಪಕಾರದಲ್ಲಿ ಆಸಕ್ತಿ ಇದ್ದಂತಿರಲಿಲ್ಲ. ಅದಕ್ಕೇ ಈಗ ನಾನು ಮತ್ತೊಂದು ವರಸೆ ತೆಗೆದೆ. ಅವನಿಗೆ ನನ್ನ ಮೇಲೆ ಕನಿಕರ ಹುಟ್ಟಿಸುವ ಧ್ವನಿಯಿಂದ ನೋಡಪ್ಪಾ ನೀನು ಹೋಗದೇ ಇದ್ದರೆ, ನಾನೇ ಕುಂಟುತ್ತಾ ಹೋಗಬೇಕಾಗುತ್ತದೆ ಎಂದೆ. ಅದಕ್ಕೆ ಆ ಹುಡುಗಏನಂದಗೊತ್ತೇ? ಚನ್ನಾಗಿ ಗಮನಿಸಿ. ಹೇಗಾದರೂ ಸರಿ. ಕುಳಿತಲ್ಲಿಂದ ಏಳದೇ ಇಷ್ಟೇ ಅವನು ಹೇಳಿದ್ದು.

ಆಶ್ಚರ್ಯ, ದು:ಖ, ನಿರಾಸೆ, ಭಾವಿ ಭಾರತದ ಪರಿಸ್ಥಿತಿಗಾಗಿ ಪರಿತಾಪ, ಮುಂದಿನ ಪೀಳಿಗೆಯ ಮೇಲೆ ಕೋಪ, ತನ್ನ ಸ್ವಂತ ಮಂಡಿಯ ಮೇಲೆ ಆಕ್ರೋಶ, ಎಲ್ಲವೂ ಒಟ್ಟಾಗಿ ನನ್ನನ್ನು ಕಾಡಿದವು. ಹನ್ನೆರಡು ಹದಿನೈದು ವರ್ಷದ ಹೈಕಳೆಲ್ಲಾ ಇಂಥಾ ಕಲ್ಲು ಗುಂಡುಗಳಾದರೆ ಮೂರನೆಯ ಪಂಚವಾರ್ಷಿಕ ಯೋಜನೆಗೆ ಮೂರು ನಾಮವೇ ಗತಿ ಎಂದೆನಿಸಿತು ನನಗೆ. ಆ ಎಣಿಕೆಯಿಂದ ಕಣ್ಣಂಚಿನಲ್ಲಿ ಒಂದು ತೊಟ್ಟು ಕಂಬನಿಯೂ ಕೂಡಿ ಬಂತು. ಆ ಹುಡುಗನಿಗೂ ನನ್ನಷ್ಟು ಆಯಸ್ಸು ದಯಪಾಲಿಸು. ಅವನ ಮಂಡಿಯೂ ಉಳುಕಲಿ. ಅವನ ಮೊಮ್ಮಗ ಅವನಿಗೂ ಹೀಗೇ ಹೇಗಾದರೂ ಸರಿ ಅನ್ನಲಿ ಎಂದು ಒಳಗೊಳಗೇ ಶಪಿಸಿದೆ.

ಟಪ್ಪಾಲು ಡಬ್ಬವನ್ನು ಸಮೀಪಿಸುತ್ತಾ ನನ್ನ ಕೋಪ ಆರಿತು. ಆಶ್ಚರ್ಯ ತಣ್ಣಗಾಯಿತು. ದು:ಖ ಕರಗಿತು. ಬಿಸಿ ಉಸಿರು ಮಂಗಮಾಯ ಆಯಿತು. ಹುಡುಗ ನಿಜಕ್ಕೂ ಜಾಣ, ಬುದ್ಧಿವಂತ, ಬೆರಿಕೆ, ಬದುಕುವ ದಾರಿ ತಿಳಿದವ, ರಾಜಕಾರಣೀ ಎಂಬಿವೇ ಮುಂತಾದ ವಿಚಾರ ತರಂಗಗಳು ನನ್ನ ತಲೆಯೊಳಗೆ ತೂರಿಬಂದವು.

ಹೇಗಾದರೂ ಸರಿ ಎನ್ನುವ ತತ್ವ ಅನುಸರಿಸಿದರೆ ಆಲೋಚನೆಯ, ವಾದ, ಪ್ರತಿವಾದದ, ವಿಚಾರ ಮಂಥನದ ಗೊಡವೆಯೇ ಬೇಕಿಲ್ಲ. ರಾಮನಾದರೂ ಸರಿ, ರಾವಣನಾದರೂ ಸರಿ, ಬೀಸುವುದೊಂದಕ್ಕೆ ಒಂದಿಷ್ಟು ರಾಗಿ ಸಿಕ್ಕರಾಯಿತು. ತಾಳಿದವ ಬಾಳಿಯಾನು, ಹೆಮ್ಮರ ಬಿದ್ದರೂ ಹಂಚಿಕಡ್ಡಿ ಉಳಿಯುತ್ತೆ. ಆದ್ದರಿಂದ ಹೊಂದಿ ಬಾಳುವುದೇ ಮಂದಿಯ ಕರ್ತವ್ಯ. ಹಾಗೂ ಸರಿ, ಹೀಗೂ ಸರಿ, ಹೇಗಾದರೂ ಸರಿ. ತಪ್ಪೆಂಬುದೇ ಇಲ್ಲ ತಬ್ಬಲಿಗಳ ಬಾಯಲ್ಲಿ. ಅದೂ ನ್ಯಾಯ ಇದೂ ನ್ಯಾಯ. ಹಾಗೂ ಹೇಳಬಹುದು, ಹೀಗೂ ಹೇಳಬಹುದು. ಹಠ ಮಾಡಿದರೆ ಮಾರಿ ನುಂಗಿ ಬಿಡುವಳು ಇತ್ಯಾದಿ ಆಪ್ತ ವಾಕ್ಯಗಳನ್ನನುಸರಿಸಿ ಬಾಳಲು ಆ ಹುಡುಗ ಅರ್ಹತೆ ಪಡೆದಿದ್ದಾನೆ ಎಂದೆನಿಸಿತು. ಸಕಲ ಪ್ರಾಣಿಗಳೂ ಈ ಹೇಗಾದರೂ ಸರಿತತ್ವವನ್ನೇ ಜೀವನ ಧ್ಯೇಯವಾಗಿ ಹಿಡಿದಿವೆ. ಹೀಗೆಯೇ ಸರಿ ಎಂದು ಮೊಂಡು ಹಿಡಿದ ಹಠವು ಜಗತ್ತಿನಲ್ಲೇ ನಿರ್ನಾಮ.

ಹೇಗಾದರೂ ಸರಿ ಎಂದು ಹೇಳುತ್ತಾ ಬಂದದ್ದೆಲ್ಲಾ ಬರಲಿ ಎಂಬ ಭಾವನೆಯಿಂದ ಜಪ್ಪಯ್ಯ ಎಂದು ಕೂರುವ ಇಂಥಾ ಹುಡುಗರಿಂದಲೇ ನಮ್ಮ ದೇಶ, ಈ ಪ್ರಜಾಸತ್ತಾತ್ಮಕ ಯುಗದಲ್ಲಿ ಉಳಿಯುತ್ತದೆ. ನಾಳೆ, ಈ ಹುಡುಗ ದೊಡ್ಡವನಾಗುತ್ತಾನೆ, ಭಾರೀ ಗುಮಾಸ್ತನಾಗುತ್ತಾನೆ, ಎಂಟು ಮಕ್ಕಳ ತಂದೆ ಎನಿಸಿ ಸೊಸೈಟಿ ಸಾಲಕ್ಕೆ ಕಂತು




ಕಟ್ಟುತ್ತಿರುತ್ತಾನೆ. ಗಾಂಧಿ ಮೈದಾನದಲ್ಲಿ ಒಬ್ಬ ಬಂದು ಒಂದು ದಿನ ಮುಷ್ಠಿ ಬಿಗಿದು ಭಾಷಣ ಮಾಡುತ್ತಾನೆ. ಮಾರನೆಯ ದಿನ ಮತ್ತೊಬ್ಬ ಬಂದು ಮುಷ್ಠಿ ಸಡಿಲಿಸಿ ಮಾತಾಡುತ್ತಾನೆ. ಅಲ್ಲಾಡುವುದಿಲ್ಲ ಈತ!. ಅದೂ ಸರಿ ಇದೂ ಸರಿ, ಹೇಗಾದರೂ ಸರಿ ಎನ್ನುತ್ತಾನೆ. ಅದು ತಪ್ಪು ಇದೇ ಸರಿಎಂದು ವಾದಿಸಿ ಆ ಜಗಳಗಂಟರ ಗುಂಪಿಗೆ ಆತ ಸೇರುವುದೇ ಇಲ್ಲ. ಇಂಥಾ ಹುಡುಗರು ಒಂದು ಹತ್ತು ಕೋಟಿ ಭಾರತದಲ್ಲಿ ಉತ್ಪತ್ತಿಯಾದರೆ ದೇಶವೇ ತಣ್ಣಗಾಗಿ ಭಾರತ ತಂಪಾಗುವುದರಲ್ಲಿ ಸಂದೇಹವೇನು ? ಏಕೆ ಭಾರತದ ವಿದೇಶಾಂಗ ನೀತಿಯ ಧೋರಣೆಯೇ ಈ ಹುಡುಗನ ಹೇಳಿಕೆಯೇ ಅಲ್ಲವೇ. ಅದೂ ಸರಿ ಇದೂ ತಪ್ಪಿಲ್ಲ ಇದರಲ್ಲೂ ದೋಷಗಳಿಲ್ಲವೆಂದಲ್ಲ. ಅದರಲ್ಲೂ ಬೇಕಾದಷ್ಟು ಗುಣಗಳಿವೆ. ಹೇಗಾದರೂ ಸರಿ ಎಂದಲ್ಲವೇ ನಾವು ಕಾಲ ಕಳೆಯುತ್ತಾ ಇರುವುದು.

ವಿದೇಶಾಂಗ ನೀತಿ ಏನು, ವಿಜ್ಞಾನಾಂಗ ನೀತಿಯೇ ಅದು. ಭೌತಶಾಸ್ತ್ರಜ್ಞರನ್ನು ಕೇಳಿ, ಸೂರ್ಯ ಭೂಮಿಯನ್ನು ಸುತ್ತುತ್ತಿದ್ದಾನೆ ಎಂದರೂ ಒಂದೇ ಭೂಮಿ ಸೂರ್ಯನ ಸುತ್ತ ಸುತ್ತುತ್ತಿದೆ ಎಂದರೂ ಒಂದೇ ಲೆಕ್ಕಾಚಾರಕ್ಕೆ ಎನ್ನುತ್ತಾರೆ. ಕಲ್ಲು ಭೂಮಿಗೆ ಬೀಳುತ್ತಿದೆ ಎಂದರೂ ಸರಿಯೇ, ಭೂಮಿ ಕಲ್ಲಿನ ಕಡೆಗೆ ಏಳುತ್ತದೆ ಎಂದರೂ ಸರಿಯೇ ಅಂತೆ. ಹೇಗಿದೆ ಹೇಳಿಕೆ.

ಏಕೆ, ಪ್ರಜಾಪ್ರಭುತ್ವ ಎಂದರೂ ಸರಿಯೇ, ಅಯೂಬ್ ಪ್ರಭುತ್ವ ಎಂದರೂ ಸರಿ, ಪೋರ್ಚುಗಲ್ ಆಡಳಿತ ಎಂದರೂ ಸರಿ, ಹೇಗಾದರೂ ಸರಿ ನಮ್ಮ ಕಡೆಯವರಾದರೆ ಸಾಕು ಎಂದು ಘೋಷಿಸುತ್ತಿಲ್ಲವೇ ಜನ ಈಗ ? ಸಾಲ ಅಂದರೂ ಒಂದೇ ದಾನ ಅಂದರೂ ಒಂದೆ. ಹಣ ಬರುವುದು ಮುಖ್ಯ ಎಂದು ಹೇಳುತ್ತಿಲ್ಲವೇ ಆರ್ಥಿಕ ಮಂತ್ರಿಗಳನೇಕರು.


ಇಂಗ್ಲಿಷಾದರೂ ಸರಿ ಕನ್ನಡವಾದರೂ ಸರಿ ಕವಿತೆ ಬರೆದರೆ ಅರ್ಥವಾಗಬಾರದು. ಅನರ್ಥವಾಗಬೇಕು. ಅದು ಮುಖ್ಯ ಎಂದು ವಾದಿಸುತ್ತಾ ಇಲ್ಲವೇ ಸಾಹಿತ್ಯ ಕ್ಷೇತ್ರದ ಹಲವು ದಿಗ್ದಂತಿಗಳು .ಇದೇ ಚಾಳಿ ಚಿತ್ರಕಲೆಗೂ ಚಲನಚಿತ್ರ ಕಲೆಗೂ ಹರಡಿಲ್ಲವೇ. ನೂರುಜನ ನೂರೆಂಟು ಹೇಳಲಿ, ಮೊಳೆ ಹೊಡೆದು ತಗುಲಿಸಿದರಾಯಿತು ಎನ್ನುತ್ತಾರೆ ಚಿತ್ರಕಲಾವಿದರು. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ, ಒಂದು ಕಿವಿಗೆ ಮೊಸರು ಇನ್ನೊಂದು ಕಿವಿಗೆ ಕೆಸರು ತುಂಬಿ ಹೇಗಾದರೂ ಸರಿ ಕಾಂಪ್ಲಿಮೆಂಟರಿ ಕೇಳದಿದ್ದರೆ ಸಾಕು ಎಂದು ಸಿನಿಮಾದವರು ಹೇಳುತ್ತಿಲ್ಲವೇ.

ನಿಜವಾಗಿ ನೋಡಿದರೆ ಹೇಗಾದರೂ ತಪ್ಪು ಎಂದು ಹೇಳುವುದಕ್ಕಿಂತ ಹೇಗಾದರೂ

ಸರಿ ಎಂದು ಸಾಧಿಸುವುದೇ ವೇದಾಂತದ ಒಳಗುಟ್ಟು. ಭಗವಂತನನ್ನು ಬಳಿ ಎಂದರೂ ಸರಿ ಕಪ್ಪೆಂದರೂ ಸರಿ, ಸಹಸ್ರಶೀರ್ಷಾ ಎಂದರೂ ಸರಿ, ಐದು ತಲೆಯವನು ಎಂದರೂ ಸರಿ, ತಲೆಯೇ ಇಲ್ಲದವನು ಎಂದರೂ ಸರಿ. ಎಲ್ಲ ಮಾತುಗಳೂ ಅವನಿಗೆ ಅನ್ವಯ. ಒಂದು ಮಾತೂ ಅವನಿಗೆ ಅನ್ವಯಿಸದು.

ಇದೆಲ್ಲವನ್ನೂ ಯೋಚಿಸಿದಾಗ ಹೇಗಾದರೂ ಸರಿ ಅಂದ ಹುಡುಗ ಹುಡುಗ ನಿಜಕ್ಕೂ ತತ್ವದ ತಳವನ್ನು ಕಂಡವ ಎನಿಸುತ್ತಾ ಅವನನ್ನು ಮೆಚ್ಚಿ ಅನಿಗಾಗಿ ಅರ್ಧಾಣೆಗೆ ಕಡಲೆಕಾಯನ್ನು ಕೊಂಡೆ. ಟಪಾಲ್ ಡಬ್ಬದ ಕೆಳಗೆ ಕುಳಿತಿದ್ದ ಮುದುಕಿಯಿಂದ. ನಂತರ ಕಡಲೇ ಕಾಯಿಯನ್ನು ಆ ಹುಡುಗನಿಗೆ ಕೊಡುತ್ತಾ ಲೋ ಸುಲಿದು ಕೊಡಲೋ ಹಾಗೇ ಕೊಡಲೋ ಎಂದರೆ ಹುಡಗ ಅದಕ್ಕೂ ಹೇಗಾದರೂ ಸರಿ ಅನ್ನೋಣವೇ. ಸುಲಿದೇಕೊಟ್ಟೆ ಎನ್ನಿ ನನ್ನ ಹಣೆ ಬರಹ.

■




ಅರ್ಧ ಕಾಫೀಸ___ಒಂದು

ಮನೋವಿಧಾನ

## ಧನಪಿಶಾಚಿ

ನಾಲ್ಕು ವರ್ಷಗಳಿಂದ ನಾನೇ ನಾನು ನಮ್ಮಪ್ಪ ಕಟ್ಟಿಸಿ ನನಗಾಗಿ ಬಿಟ್ಟುಹೋದ ಬಸವನಗುಡಿಯ ಬಂಗಲೆಯಲ್ಲಿ ವಾಸವಾಗಿದ್ದೇನೆ. ದೊಡ್ಡ ಕಾಂಪೌಂಡು, ಹೂವಿನ ತೋಟ, ಸಂಪಿಗೆ ಮರ, ಉಯ್ಯಾಲೆ, ಕಲ್ಲು ಬೆಂಚು, ನಾಯಿಗೊಂದು ಮರದ ಗೂಡು. ಒಳಗೆ ಡ್ರಾಯಿಂಗ್‌ರೂಮು, ರೀಡಿಂಗ್ ರೂಮು, ಅವಳಿಗೊಂದು ಪ್ರತ್ಯೇಕ ದಿವಾನ್ ಖಾನೆ. ಇತ್ಯಾದಿ ಇತ್ಯಾದಿ, ಒಟ್ಟಿನಲ್ಲಿ ಸುಖ ಜೀವನ.

ಯಾವುದೋ ಒಂದು ಶನಿವಾರ ಮಧ್ಯಾಹ್ನ ಕಳೆದು ಮೂರು ಗಳಿಗೆಯಾಗಿದೆ. ಬಂದ ಮನೆಯೊಳಗೆ ಒಬ್ಬ ಮದರಾಸಿನವ ನನ್ನ ತಲೆಗೆ ಹುರುಪು ಹಿಡಿಸುವುದಕ್ಕೆ. ಮುಂದಿನ ರೂಮೊಂದನ್ನು ತನಗೆ ಬಾಡಿಗೆಗೆ ಕೊಡುವುದಾದರೆ ತಿಂಗಳಿಗೆ 15 ಲಕ್ಷಕೊಡುವುದಾಗಿ ಹೇಳಿದ. ನನಗೆ ಆಶ್ಚರ್ಯವಾಯಿತು. ಇಂಥಾ ದಡ್ಡರೂ ಮದರಾಸಿನಲ್ಲಿ ಅವತಾರ ಮಾಡುತ್ತಿದ್ದಾರಲ್ಲ ಅಂತ ಹಿಗ್ಗಿದೆ. ಕೀಟಲೆಗೋಸ್ಕರ 20 ಕೊಡಬೇಕು ಮೂರು ತಿಂಗಳು ಅಡ್ವಾನ್ಸ್ ಸಹಿತ ಅಂದೆ. ಅಲ್ಲೇ ನಿಂತ ನಿಲುವಿನಲ್ಲೇ ಕಾಸೆಣಿಸಿದ.

ಅವನು ಬಂದ ಒಂದು ವಾರದೊಳಗೆ ಮತ್ತೊಬ್ಬ ಬಂದ. ಆಚೆ ಕಡೆ ರೂಮು ವರಾಂಡದ್ದು. 25ಕ್ಕೆ ಕೊಡುತ್ತೀರಾ ದಯವಿಟ್ಟು ಅಂದ. 30ಕ್ಕೆ ಒಪ್ಪಿ ಕೃತಾರ್ಥನಾದೆ ಎಂದು ಹೇಳುತ್ತಾ ಅವನೂ ಕಾಸೆಣಿಸಿದ.

ಈ ಇಬ್ಬರ ಮಂಕುತನವನ್ನು ನೆನೆದು ನಾನೂ ಅವಳೂ ದಿನವೂ ನಗುತ್ತಿದ್ದೆವು. ಇಡೀ ಮನೆಗೆ 50 ರೂಪಾಯಿ ಬಾಡಿಗೆ ಸಿಗದು ಅಂತ ನಾವು ಕೈ ಕೈ ಹಿಸುಕಿಕೊಳ್ಳುತ್ತಿದ್ದ ಕಾಲವನ್ನೇ ನೆನೆದು ನಮ್ಮ ಭಾಗ್ಯೋದಯಕ್ಕಾಗಿ ಹಿಗ್ಗಿದೆವು. ಮುಂದಿನ ತಿಂಗಳಲ್ಲಿ ಮತ್ತೊಬ್ಬ ಬಂದ. ತಮ್ಮ ಮನೆಯಲ್ಲಿ ಈ ಮುಂದಿನ ಹಾಲ್, ಡ್ರಾಯಿಂಗ್ ರೂಮು ಅದನ್ನು ನಮ್ಮ ಕರ್ಮ ಸಮಾಜದ ಕಛೇರಿಗೆ ಬಾಡಿಗೆಗೆ ಕೊಟ್ಟು ಉಪಕಾರ ಮಾಡಬೇಕು ಮಹಾಸ್ವಾಮಿ ಅಂದ. ಕಾಸು ಕಿವಿಯಲ್ಲಿ ಕಿಲಕಿಲನೆ ನಕ್ಕಿತು. ಭಾಗ್ಯಲಕ್ಷ್ಮಿಯ ಕೈ ಬಳೆ ಸದ್ದು ಕೇಳಿ ಬಂತು. ನೂರು ರೂಪಾಯಿಗೇರಿ ಅವನನ್ನು ಐವತ್ತಿಂದ ಎತ್ತಿ ಎಂಭತ್ತಿಕ್ಕಿಳಿದು ಅವನನ್ನ ಎಪ್ಪತಕ್ಕಕ್ಕೆಳೆದು ಕಡೆಗೆ 75 ಅಂತ ನಿರ್ಧಾರವಾಯಿತು. ಅಲ್ಲಿಂದ ಮುಂದಕ್ಕೆ ನಾನು ಹಿತ್ತಲ ಬಾಗಿಲಿಂದಲೇ ಗೃಹಪ್ರವೇಶ ಮಾಡುತ್ತಿದ್ದುದು ಕೊಂಚ ನಾಚಿಕೆಗೇಡು ! ಆದರೂ ಹಣವಾನ್ ಗುಣವಾನ್ ಲೋಕೆ, ಹಣಹೀನೋ ಹೆಣಾಧಮ: ಎಂಬ ಸುಭಾಷಿತವನ್ನೇ ಸ್ಮರಿಸಿದೆ.

ಮುಂದಿನ ರೂಮುಗಳಲ್ಲಿ ಒಂದಕ್ಕೆ 30, ಒಂದಕ್ಕೆ 20 ಎಂಬ ತಾರತಮ್ಯ ನನ್ನ ಮನಸ್ಸಾಕ್ಷಿಗೆ ಸರಿಬೀಳಲಿಲ್ಲ. ನಾನಾ ರೀತಿಯ ಕೋಟಲೆಗಳಿಂದ 20 ರೂಪಾಯಿ ಆಸಾಮಿಯನ್ನು ಓಡಿಸಿದೆ. ಅವನೂ ಶುದ್ಧ ಹೇಡಿ. ಸಧ್ಯ, ಕೋರ್ಟುಗೀರ್ಟು ಹತ್ತಲಿಲ್ಲ.

ಅಷ್ಟರೊಳಗೆ ಅವಳು ಒಂದು ಹೊಸ ಯೋಜನೆ ಹೂಡಿದಳು ಗರಾಜಲ್ಲಿ ಮಂಡಿ ಎತ್ತರದ ಒಂದು ಅಡ್ಡ ಗೋಡೆ, ಮೊಣಕೈ ಎತ್ತರದಲ್ಲಿ ಒಂದು ಅಟ್ಟ ಕಟ್ಟಿಸಿಬಿಟ್ಟರೆ ಯಾರಾದರೂ ಬಡ ಮೇಷ್ಟ್ರ ಸಂಸಾರ ವಾಸಕ್ಕೆ ಬರುತ್ತಾರೆ, 20, 30 ಸಂತೋಷವಾಗಿ ಕೊಡುತ್ತಾರೆ ಎಂದಳು. ನನಗೆ ಪಾಠ ಹೇಳಿದ್ದ ಮೇಷ್ಟರುಗಳಲ್ಲಿ ಹಲವರನ್ನು ನೆನೆಸಿಕೊಂಡೆ. ಅಂಥವರಿಗೆ ನಮ್ಮಗರಾಜು ಸರಿಯಾದ ವಾಸಸ್ಥಳವೆನಿಸಿತು. ಅಡ್ಡ ಗೋಡೆಗಳೆದ್ದವು. ಈಗ ಈ ಹಾಳು ಷೆಡ್ಡಿನಿಂದ ತಿಂಗಳಿಗೆ ಮೂವತ್ತರೆಡೂವರೆ ಬರ್‍ತಾ ಇದೆ, ಸಲೀಸಾಗಿ. ನಮ್ಮಪ್ಪನ ಕಾಲದಲ್ಲಿ ಬೇಕಾದಾಗ ಇರಲಿ ಅಂದು ಒಂದು ಭಾವಿ ತೋಡಿದ್ದರು ಅದೀಗ

ತುಂಬಾ ಅನುಕೂಲವಾಯಿತು ಬಾಡಿಗೆ ಸಂಸಾರಗಳಿಗೆ.

ಮೇಯಿನ್ ಹೌಸ್‌ನಲ್ಲಿದ್ದ ನನಗೂ ಯಾಕೋ ಜಾಗ ತುಂಬಾ ಖಾಲಿ ಖಾಲಿ ಅಂತತೋರ ಹತ್ತಿತು. ನಾವಿದ್ದುದ್ದು ಐದು ಜನ. ನಮಗೇಕೆ ಅಷ್ಟು ಭಾರೀ ಸ್ನಾನದ ಮನೆ? ಅದನ್ನೇ ಮತ್ತೊಂದು ಅಡಿಗೆ ಮನೆಯಾಗಿ ಮಾರ್ಪಡಿಸಿ ದೇವರ ಮನೆಯನ್ನೇ ಎರಡು ಚಿಕ್ಕಚಿಕ್ಕ ಬಚ್ಚಲು ಮನೆಗಳಾಗಿ ವಿಂಗಡಿಸಿದರೆ ಎರಡು ಸಂಸಾರಗಳು ಮೇಯಿನ್ ಹೌಸಿನಲ್ಲೇ ಸುಖವಾಗಿ ಇರಬಹುದಲ್ಲ ಎಂದೆನಿಸಿತು. ಅದಕ್ಕೆ ಅನುಕೂಲ ಅಮಾತ್ಯಗಿರಿ ಮಾಡುವ ಒಬ್ಬ ಕಂಟ್ರಾಕ್ಟರನೂ ಗಂಟುಬಿದ್ದ ನನಗೆ ! ಡ್ರಾಯಿಂಗ್ ರೂಮಿನ ಎಡಭಾಗದ ಹಿಂದಿನ ಸಾಲಲ್ಲಿದ್ದ ಒಂದು ರೂಮು, ಅದರ ಪಕ್ಕದ ಊಟದ ಕೋಣೆ, ಅದರ ಪಕ್ಕದ ಹೊಸ ಅಡಿಗೆ ಮನೆ ಇವಿಷ್ಟಕ್ಕೂ 50 ಬಂತು. ಅಲ್ಲೇ ಅವರಿಗೆ ಒಂದು ಕಿಟಕಿಯನ್ನೊಡೆದು ಎರಡು ಬಾಗಿಲುಗಳನ್ನು ಮುಚ್ಚಿ ಪ್ರತ್ಯೇಕ ಮಾಡಿಕೊಟ್ಟೆ.



ಬಲಗಡೆ ಭಾಗ ನನಗೆ ಉಳಿದದ್ದು, ರೀಡಿಂಗ್ ರೂಮು, ಅದರ ಪಕ್ಕದ ರೂಮು, ಉಗ್ರಾಣ, ದೇವರ ಮನೆಯ ಅರ್ಧ ಭಾಗದ ಅಡಿಗೆ ಮನೆ, ಅಷ್ಟರೊಳಗೆ ನನ್ನ ಬುದ್ಧಿ ಇನ್ನೂ ಚುರುಕಾಯಿತು. ಎರಡೇ ಎರಡು ರೂಮುಗಳಲ್ಲಿ ಎಂಟು ಹತ್ತು ಜನ ಇಹಲೋಕದ ಜೀವನವನ್ನು ನಿಭಾಯಿಸಬಲ್ಲವರಾಗಿರುವಾಗ ನಾನು ಏಕೆ ಉಗ್ರಾಣ ಅಡಿಗೆ ಮನೆಗಳಲ್ಲಿ ಮಾತ್ರ ಇದ್ದು ಇನ್ನೊಂದಿಷ್ಟು ಹಣ ? ಸರಿ, ಕಿಟಕಿಯೊಡೆದು ಬಾಗಿಲು ಮುಚ್ಚಿ ರೀಡಿಂಗ್ ರೂಮನ್ನು ಅದರ ನೆರೆ ರೂಮನ್ನು ಬಾಡಿಗೆಗೆ ಎಂದು ಪ್ರಕಟಿಸಿದೆ. ಸಂಜೆ ಮನೆ ಮುಂದೆ ಒಂದು ಜಾತ್ರೆನೇ ಸೇರಿಬಿಟ್ಟಿತು. 60 ರೂಪಾಯಿ ಅಂತ ಒಬ್ಬನನ್ನು ವರಿಸಿದೆ. ಉಳಿದವರನ್ನೆಲ್ಲಾ ಆಚೆ ಕಳುಹಿಸಲು ಸ್ಪೆಷಲ್ ಪೊಲೀಸ್ ದಳವೊಂದು ಅಂಬುಲೆನ್ಸ್ ಸಹಿತವಾಗಿ ಬರಬೇಕಾಗಿ ಬಂತು.

ಹೀಗಾಗಿ ನನ್ನ ಪಾಲಿಗೆ ಉಳಿದ ಜಾಗಕ್ಕೆ ನಾನು ಅಡಿಗೆ ಮನೆಯೊಳಗಿಂದಲೇ ಪ್ರವೇಶಿಸಬೇಕಾಗಿ ಬಂದಿದೆ. ಮೊನ್ನೆಯಿಂದ ಒಬ್ಬ ಉಗ್ರಾಣಕ್ಕೂ ಅಂಗಲಾಚುತ್ತಾ ಇದ್ದಾನೆ. ಪಾಪ ಎಂಟು ತಿಂಗಳಿಂದ ವಾಸಕ್ಕೆ ಮನೆ ಇಲ್ಲದೇ ಒದ್ದಾಡುತ್ತಾ ಇದ್ದಾನಂತೆ. ಹೊಟ್ಟೆಯೆಲ್ಲ ಹೋಟೆಲ್ ನೋವು ಷುರುವಾಗಿರುವುದರಿಂದ ಹೆಂಡತಿಯನ್ನು ಊರಿಂದ ಕರೆಸಿಕೊಂಡು ಹೊಸ ಸಂಸಾರ ಹೂಡಬೇಕಂತೆ. ಅವಳು, ಅವನ ತಾಯಿ ಇಬ್ಬರೂ ಇಲ್ಲೇ ಇರುತ್ತಾರಂತೆ. ಇದ್ದಿಲೊಲೆ ಅಡಿಗೆ, ಕೆಂಪಾಂಬುಧಿ ಸ್ನಾನ, ಅಂತಾನೆ. ಉಗ್ರಾಣವನ್ನು 15 ರೂಪಾಯಿಗೆ ಬಾಡಿಗೆಗೆ ಕೊಡೋಣ ಎಂದಿದ್ದೇನೆ. ನಾಳೆ ಬೆಳಗ್ಗೆ ಹೆಂಗಸರನ್ನೂ ಇತರ ಸಾಮಾನುಗಳನ್ನೂ ತಂದುಬಿಡು ಅಂತ ಹೇಳಿದ್ದೇನೆ.

ನಮ್ಮ ಮನೆ ಅಡಿಗೆ ಮನೆ ಅಂಥಾಕಿಷ್ಕಿಂದೆ ಏನೂ ಅಲ್ಲ. ಸ್ನಾನಕ್ಕೆ ಹೇಗಿದ್ದರೂ ಬೇರೆಒಂದು ಕಟ್ಟಿಸಿದ್ದೇನೆ. ನಡುಮಧ್ಯ ಒಂದು ಗೋಡೆ ಎಬ್ಬಿಸಿದರೆ ಆಚೆ ಹುಡುಗರು ಓದಿಕೊಳ್ಳುತ್ತವೆ. ಈಚೆ ಒಂದು ಕೈ ಗೋಡೆ ಕಟ್ಟಿಬಿಟ್ಟರೆ ಆಚೆ ಅವಳು ಈಚೆ ನಾನು ?

ಅಯ್ಯೋ ! ನಿಜವಾಗಿಯೂ ನಮಗೆ ಎಷ್ಟು ಜಾಗ ಅಗತ್ಯ ಮಹಾ ! ಹದಿನಾಲ್ಕು ಲೋಕಗಳಿಗೂ ಒಡೆಯನಾದ ಆ ಮಹಾವಿಷ್ಣುವೇ ಒಂದುಆಲದೆಲೆ ಮೇಲೆ !?

■

ಕಸ್ತೂರಿಯವರ ವೈವಿಧ್ಯಮಯ ಲೇಖನಗಳು

## ಷೂನಿಂದಕ್ಷೌರ

ಬೆಂಗಳೂರಿಗೆ ಮೊನ್ನೆ ನಾನು ಹೋಗಿದ್ದಾಗ ಕಾಲಿಗೆ ಷೂ ಕೊಂಡುಕೊಳ್ಳುವ ಉದ್ದೇಶವೇ ಇರಲಿಲ್ಲ. ಆದರೂ ನನ್ನ ಹಳೆಯ ಗೆಳೆಯ ಸೋಮಪ್ಪನನ್ನು ಮಾರ್ಕೆಟ್ ಚೌಕದಲ್ಲಿ ಕಂಡಾಗ ನಾನೂ ಒಂದು ಜೊತೆ ತೆಗೆಯಬೇಕಾಗಿ ಬಂತು. ನೋಡು ಮಾರಾಯ, ಎಷ್ಟು ಸೊಗಸಾಗಿದೆ, ಇಲ್ಲೇ ಈ ಮೂಲೇ ಅಂಗಡೀಲಿ...........! ಬಾಗಿಲು ಮುಚ್ಚೋದೊರಳಗೆ ನೀನೂ ಒಂದು ಜೊತೆ ತಗುಲಿಕೋ ! ಎಲ್ಲಿಗೆ ಹೋಗಿದ್ದೆ ಬೆಳಗಿನಿಂದ ನನ್ನ ಕಾಲಿಗೆ ಅವನು ಇದನ್ನು ತೊಡಿಸುತ್ತಾ ಇದ್ದಾಗ ನನಗೆ ನಿನ್ನ ನೆನಪು ಬಂತು. ಬಹಳ ಅಗ್ಗವಾಗಿ ಕೊಡುತ್ತಾ ಇದಾನೆ. ಹನ್ನೆರಡೂವರೆ ರೂಪಾಯಿ ಅಷ್ಟೆ. ಬಾ, ನಿನ್ನ ಹರಕಲು ಷೂನ ಅಲ್ಲೇ ಬಿಸಾಕಬಹುದು. ಹೊಸದನ್ನು ಹಾಕಿಕೊಂಡೇ ಸಿನಿಮಾ ಎರಡನೆಯ ಷೋಗೆ ದರ್ಶನ ಕೊಡೋಣ ಎಂದು ಒತ್ತಾಯ ಮಾಡಿದ.

ಹೌದು, ತೀರಾ ಹರಕಲಾಗಿಯೇನೋ ಇತ್ತು. ಅದರ ಹೊಟ್ಟೆಯಲ್ಲಿರೊಟ್ಟಿಲ್ಲ, ಹೊರಕ್ಕೆ ಬಂದಿತ್ತು. ಹಿಮ್ಮಡಿ ಸಂಪೂರ್ಣ ಸವೆದಿತ್ತು. ಮುಮ್ಮಡಿ ತಳವೆಲ್ಲ ತೂತು ಬಿದ್ದು ಆಗಾಗ ಗಾಜಿನ ಚೂರುಗಳು ಚುಚ್ಚುತ್ತಿದ್ದವು.

ಸರಿ ಬಾರೋ ಎಂದು ಹೇಳಿ ಸೋಮಪ್ಪನ ಸಂಗಡ ಮೂಲೆ ಅಂಗಡಿಗೆ ನುಗ್ಗಿದೆ. ನನ್ನ ಹರಕಲು ಷೂ ನೋಡುತ್ತಲೂ ಅವನು ನನ್ನ ಗಮನವನ್ನು ಅಲ್ಲಿ ತೂಗುತ್ತಿದ್ದ ಒಂದು ಬೋರ್ಡಿನ ಕಡೆ ಸೆಳೆದ. ಸಾಲ ದೊರೆಯುವುದಿಲ್ಲ ಎಂದು ಅದರ ಮೇಲೆ ಬರೆದಿತ್ತು.

ಹರಕಲು ಷೂಗಳನ್ನು ಕಿತ್ತು ಅದಕ್ಕಿಂತ ಹರಕಲಾದ ಕಾಲು ಚೀಲವನ್ನು ಕಂಡು ಅಸಹ್ಯ ಸೂಚಿಸಿ ಆತ ನಿಮ್ಮ ಕಾಲು 9ನೇ ನಂಬರು. ಇಗೊ ಸೊಗಸಾದದ್ದು ಒಂದು ಜೊತೆ ಅಂತ ಬ್ರೌನ್ ಷೂ ತೋರಿಸಿದ.. ಕಾಲಿಗೆ ತೂರಿಸಿದ.

ನನಗೇಕೋ ಸುಖ ಕಾಣಿಸಲಿಲ್ಲ. ಸೋಮಪ್ಪನ ಷೂ ಕರೀದು, ಕರೀದರ ಸ್ಟಾಕ್ ಮುಗಿದು ಹೋಗಿದೆಯಂತೆ. ಬ್ರೌನೇ ಇರೋದಂತೆ. ನಾನು ಸ್ಯಾನಿಟರಿ ಇನ್ಸ್‌ಪೆಕ್ಟರ್ ಹುದ್ದೆಯವ. ಕೆಸರು ತುಳಿಯದೇ ಇರಲಾರೆ. ಕರೀ ಷೂವಾದರೆ ಕೆಸರಿನ ಬಣ್ಣವನ್ನು ನುಂಗೀತು ಎಂಬ ಆಸೆ ನನಗೆ.

ಒಂಭತ್ತು, ನನ್ನ ಸೈಜು ಅಂದಾಗ ನಾನು ಬೆಚ್ಚಿಬಿದ್ದೆ. ಬಿಚ್ಚಿ ಬಿಡೋಣವೆನಿಸಿತು. ಒಂಭತ್ತು ? ಅಲ್ರೀ ಒಂಭತ್ತೂವರೆ ರೀ ಅಂದೆ ನಾನು. ಹಿಂಗಾಲು ಮುಂಗಾಲು ಕೊಂಚ ಉರಿ ಪ್ರಾರಂಭವಾಗಿತ್ತು ಅಷ್ಟರಲ್ಲಿ ಸೋಮಪ್ಪ ಬಿಡಲಿಲ್ಲ, ಲೋ ಧಡಿಯಾ ಅಂದ. ಅವನೂ ಸ್ಯಾನಿಟರಿ ಇಲಾಖೆಯೇ. ನಮ್ಮ ಇಲಾಖೆಯ ನೌಕರರ ಕಾನ್ಫರೆನ್ಸಿಗಾಗಿ ನಾವು ಬೆಂಗಳೂರಿಗೆ ಹೋಗಿದ್ದುದ್ದು. ಸಂಬಳ ಸಾಲದು, ಮುಷ್ಕರ ಹೂಡಬೇಕೇ. ಅಥವಾ ಉಪವಾಸವೇ ಸಾಕೆ ಅಂತ ನಿರ್ಧರಿಸುವುದಕ್ಕೆ.

ಲೋ ಧಡಿಯಾ ! ನಾನೂ ನೀನೂ ಹಾಸ್ಟಲಲ್ಲಿದ್ದಾಗ ನಿನ್ನ ಷೂನ ನಾನೂ ನನ್ನ ಷೂನ ನೀನೂ ಅದಲು ಬದಲು ಮಡುತ್ತಿರಲಿಲ್ಲವೇನೋ ? ನಿನ್ನದೂ ನನ್ನ ಹಾಗೆಯೇ ಒಂಭತ್ತೇ ಇನ್ನಿದರ ಮೇಲೆ ಅಪೀಲುಂಟೇ ! ಕಾಸು ತೆತ್ತು ರಸೀತಿ ಪಡೆಯದೇ ಸಿನಿಮಾಗೆ ಹೋದೆವು. ಅಷ್ಟರಲ್ಲೇ ನನ್ನ ಕಾಲಿನ ಉರಿ ವಿಪರೀತವಾಯಿತು. ಸೋಮಪ್ಪನಿಗೆ ಹೇಳಿದರೆ ರೇಗುತ್ತಾನೆ, ಅವನಿಗೇನೂ ಬಾಧೆಯಾಗದ ಹಾಗೆ ಕಾಣುತ್ತಾನಲ್ಲಾ. ಅವನದೂ ಒಂಭತ್ತಾದರೆ

ನನ್ನ ಒಂಭತ್ತೇಕೆ ನನಗೆ ಈ ರೀತಿ ಬಾಧೆ ಕೊಡುತ್ತಾ ಇದೆ. ಅಂತ ಯೋಚಿಸಿದೆ. ಕತ್ತಲಲ್ಲೇ ಅವನಿಗೆ ಪತ್ತೆಯಾಗದೇ ಷೂಗಳನ್ನು ಬಿಚ್ಚಿ ಅಂಗಾಲು ಹಿಂಗಾಲು ಉಜ್ಜಿ ಕೊಂಚ ಆರಾಮವಾಗಿ ಕೂತೆ. ಅಷ್ಟರಲ್ಲೇ ಸೋಮಪ್ಪ ಲೋ ! ಹತ್ತೂವರೆಗೆ ಮೈಸೂರು ಗಾಡಿ, ಹೊರಟುಬಿಡೋಣ ನಡಿ, ಥೂ ಇದೆಂಥಾ ಸಿನಿಮಾ, ಕನ್ನಡ ಅಂತ ಬಂದ್ರೆ ಹಾಡೆಲ್ಲಾ ಹಾಳು ಹಿಂದಿಯ ಇಮಿಟೇಷನ್ ಇದಕ್ಕಿಂತ ಅಪ್ಪಟ ಹಿಂದಿ ಸಿನಿಮಾಕ್ಕೇ ಹೋಗಬಹುದಾಗಿತ್ತು ಅಂದು ಎದ್ದ. ನಾನು ತಾಳೋ ಐದು ನಿಮಿಷ, ಆಕೆ ಆತ್ಮಹತ್ಯೆ ಮಾಡಿಕೊಂಡ ಮೇಲೆ ಹಾಯಾಗಿ ಹೋಗೋಣ ಅಂದೆ. ಕಾಲಿಗೆ ಮತ್ತೆ ಷೂ ತಗುಲಿಸಿಕೊಳ್ಳಬೇಕಿತ್ತಲ್ಲ, ಅದಕ್ಕಾಗಿ ವ್ಯವಧಾನ ಸಿಗಲಿ ಅಂತ.

ಅದೂ ಆಯಿತು ! ಆಕೆ ಗತೀನೂ ಪೂರೈಸಿತು. ನಾವು ಎದ್ದೆವು. ಸ್ಟೇಷನಿಗೆ ಹೋಗಲು ಜಟಕಾನೇ ಬೇಕಾಯಿತು. ಏಕೆಂದರೆ ನನಗಂತೂ ಹಾಳು ಷೂನಿಂದಾಗಿ ಒಂದು ಹೆಜ್ಜೆಕೂಡಾ ಮುಂದಿಡಲು ಸಾಧ್ಯವಾಗಲಿಲ್ಲ.

ಪ್ಲಾಟ್‌ಫಾರಮ್‌ನಲ್ಲಿ ಆ ಬೆಳಕಿನಲ್ಲೇ ನೋಡುತ್ತೇನೆ, ಸೋಮಪ್ಪನೂ ಕೊಂಚ ಕುಂಟುತ್ತಾ ಇದ್ದ. ಅವನ ಕಾಲು ನೋಡಿದರೆ ಒಂದು ಕಾಲಿಗೆ ಕರೀ ಒಂದು ಕಾಲಿಗೆ ಬ್ರೌನ್ ! ನಕ್ಕು ನಕ್ಕು ಸಾಕಾಯಿತು. ಸೋಮಪ್ಪ ನಿನ್ನ ಕಾಲಿನದು ನೋಡಿಕೋ ಅಂದ. ಹೌದು ! ಆಶ್ಚರ್ಯ ! ನನ್ನದೂ ಹಾಗೇನೇ. ಒಂದು ಕಾಲಿನದುಕರೀ ! ಒಂದು ಕಾಲಿನದು ಬ್ರೌನ್ ! ಇದ್ಯಾಕೋ ಹೀಗಾಯಿತು ! ನನಗೆ ಅವನು ಅಂಗಡೀಲಿ ಬ್ರೌನೇ ಕೊಟ್ಟ ! ಅದನ್ನೇ ತಗುಲಿಸಿದ ಅಂದ. ನಾನು ಪ್ರಾರಂಭ ಮಾಡಿದೆ.ಅಷ್ಟರೊಳಗೆ ಗುಟ್ಟೂ ತಿಳಿಯಿತು.

ಸೋಮಪ್ಪನೂ ನನ್ನ ಹಾಗೇ ಉರಿ ತಾಳಲಾರದೇ ಸಿನಿಮಾ ಕತ್ತಲಲ್ಲಿ ನನಗೆ ತಿಳಿಯದ ಹಾಗೇ ತನ್ನ ಒಂಭತ್ತನ್ನು ಬಿಚ್ಚಿ ಬೆಂಚಿನ ಕೆಳಗೆ ತೂರಿಸಿ ಆರಾಮವಾಗಿದ್ದ.

ಇಬ್ಬರೂ ಚನ್ನಾಗಿ ನಕ್ಕೆವು. ಕರೀದು, ಬ್ರೌನ್‌ಎರಡನ್ನೂ ಬಿಚ್ಚಿ ಬೆಡ್ಡಿಂಗಿಗೆ ಸೇರಿಸಿ, ಪ್ಲಾಟ್‌ಫಾರಂ ಉದ್ದಕ್ಕೂ ಹಾಡುತ್ತಾ ಸರಿಯಾಗಿ ನಡೆದೆವು. ಆಗಿನ ಆನಂದದಲ್ಲಿ ಒಬ್ಬರಿಗೊಬ್ಬರು ಆ ಒಂಭತ್ತರ ಷೂನಿಂದಾದ ಕ್ಷೌರದ ನೆನಪೇ ಇರಲಿಲ್ಲ. ■

